MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 81 | ಮಂಗಳವಾರ : 13-01-2026 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 81 | TUESDAY : 13-01-2026 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ಇತಿಹಾಸ ಬರೆದ ರಾಯಚೂರು ಮಹಾನಗರ ಪಾಲಿಕೆಯ ಸ್ವಚ್ಛತಾ ಓಟ

## * ನಗರ ಸ್ವಚ್ಛತೆ, ಸುಂದರಗೊಳಿಸುವ ಸಂಕಲ್ಪ ಬಲಪಡಿಸಿದ ಮಹಾ ಯೋಜನೆ * ಸಂಸದರ ನೇತೃತ್ವದಲ್ಲಿ ರಾಷ್ಟ್ರೀಯ ಯುವದಿನದ ಕಾರ್ಯಕ್ರಮ * ಯುವಜನತೆಗೆ ಹೊಸ ಶಕ್ತಿ, ಪ್ರೇರಣೆ ಹಾಗೂ ಜಾಗೃತಿ * ರಾಯಚೂರು ಉತ್ಸವಕ್ಕೂ ದೊರೆತ ಮಾಸ್ ಮೊಬೈಲೈಜೇಷನ್

ಯುವಮಾರ್ಗ ಸುದ್ದಿ

**ರಾಯಚೂರು,ಜ.12–**ಸ್ವಚ್ಛ ಭಾರತ ಮಿಷನ್ ಹಾಗೂ ರಾಯಚೂರು ಉತ್ಸವ-2026ರ ಅಂಗವಾಗಿ ಜನವರಿ 12ರಂದು ರಾಯಚೂರು ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತದ ಸಂಯುಕ್ತ ಆಶ್ರಯದಲ್ಲಿ ಸ್ವಚ್ಛತಾ ಓಟ ಭವ್ಯವಾಗಿ ನಡೆಯಿತು.

ಸಚಿವರು, ಸಂಸದರು, ಶಾಸಕರ ಮಾರ್ಗದರ್ಶದಡಿಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಹಾಗೂ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ ಅವರು ವಿಶೇಷವಾಗಿ ರೂಪಿಸಿದ ಈ ಸ್ವಚ್ಛತಾ ಓಟವು ಯುವಜನತೆಗೆ ಹೊಸ ಶಕ್ತಿ, ಪ್ರೇರಣೆ ಹಾಗೂ ಜಾಗೃತಿ ನೀಡಿತು. ರಾಯಚೂರು ಜನತೆಯಲ್ಲಿ ತಮ್ಮ ನಗರವನ್ನು ಸ್ವಚ್ಛ, ಸುಂದರ ಹಾಗೂ ಆರೋಗ್ಯಕರವಾಗಿಸುವ ಸಂಕಲ್ಪವನ್ನು ಮತ್ತಷ್ಟು ಬಲಪಡಿಸಿತು.

ಕಾರ್ಯಕ್ರಮಕ್ಕೆ ಸಂಸದರಾದ ಜಿ. ಕುಮಾರ್ ನಾಯಕ್ ಅವರು ನೇತೃತ್ವ ವಹಿಸಿ ಸ್ವಚ್ಛತಾ ಓಟಕ್ಕೆ





ಚಾಲನೆ ನೀಡಿದರು. ಈ ವೇಳೆ ಸಂಸದರು ಮಾತನಾಡಿ, ಸ್ವಾಮಿ ವಿವೇಕಾನಂದರ ಮೌಲ್ಯಗಳು, ಸದೃಢ ಶರೀರ ಮತ್ತು ಮನಸ್ಸಿನ ಮಹತ್ವ ಮತ್ತು ಸ್ವಚ್ಛ, ಆರೋಗ್ಯಕರ ವಾತಾವರಣ ನೆನಪಿಸಿದರು.

ಸ್ವಚ್ಛತಾ ಓಟದಲ್ಲಿ 3000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳಿಂದ– 65ರ ವಯೋಮಾನದವರು ಓಟದಲ್ಲಿ ಕಂಡು ಬಂದರು. ವಿದ್ಯಾರ್ಥಿಗಳು, ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉತ್ಸಾಹದಿಂದ ಪಾಲ್ಗೊಂಡರು. ರಾಯಚೂರು ಇತಿಹಾಸದಲ್ಲೇ ಮೊದಲ ಬಾರಿಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜನರು ಮ್ಯಾರಥಾನ್ ಓಟಕ್ಕೆ ಸ್ವಯಂಪ್ರೇರಿತವಾಗಿ ಭಾಗವಹಿಸಿದ್ದು ಮಹತ್ವದ ಸಾಧನೆಯಾಗಿ ರಾಯಚೂರು ಇತಿಹಾಸದಲ್ಲಿ ದಾಖಲಾಯಿತು.

ಈ ಸ್ವಚ್ಛತಾ ಓಟವು ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು, ಪರಿಸರ ಸಂರಕ್ಷಣೆ, ಆರೋಗ್ಯಕರ ಜೀವನ ಶೈಲಿ ಹಾಗೂ ಪಾಲಿಕೆಯೊಂದಿಗೆ ನಾಗರಿಕರ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಿದೆ. ಕಾರ್ಯಕ್ರಮಕ್ಕೆ ದೊರೆತ ವ್ಯಾಪಕ ಜನಬೆಂಬಲಕ್ಕೆ ಸಾರ್ವಜನಿಕರು ಸರ್ಕಾರ ಹಾಗೂ ಮಹಾನಗರ ಪಾಲಿಕೆಯ ಈ ಮಹತ್ವದ ಮುಂದಾಳತ್ವಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಈ ಸ್ವಚ್ಛತಾ ಓಟದ ಮೂಲಕ ರಾಯಚೂರು ಜನತೆ ತಮ್ಮ ನಗರಕ್ಕಾಗಿ ಹೊಂದಿರುವ ಜವಾಬ್ದಾರಿ, ಒಗ್ಗಟ್ಟು ಮತ್ತು ಅಪಾರ ಶಕ್ತಿಯನ್ನು ಸ್ಪಷ್ಟವಾಗಿ ಪ್ರದರ್ಶಿಸಿದರು.

ವಿಭಿನ್ನ ವಯೋಮಾನದವರು, ಹಿನ್ನೆಲೆಯವರು ಹಾಗೂ ವೃತ್ತಿಯವರು ಒಂದೇ ಗುರಿಗಾಗಿ ಒಟ್ಟಾಗಿ ಭಾಗವಹಿಸಿರುವುದು, ರಾಯಚೂರು ಒಂದು ಜಾಗೃತ, ಹಾಗೂ ಚೈತನ್ಯಭರಿತ ನಗರ ಎಂಬುದನ್ನು ಸಾಬೀತುಪಡಿಸಿತು.

ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಮಾನವ ಸರಪಳಿಯನ್ನು "ರಾಯಚೂರು ಉತ್ಸವ-2026" ಎಂಬ ರೂಪದಲ್ಲಿ ವಿನ್ಯಾಸಗೊಳಿಸಲಾಗಿದ್ದು, ಅದನ್ನು ಡ್ರೋನ್ ಮೂಲಕ ಚಿತ್ರೀಕರಿಸಲಾಯಿತು. ಈ ದೃಶ್ಯವು ರಾಯಚೂರು (**2ನೇ ಪುಟಕ್ಕೆ**>>>)

# ಪಿಡಿಓ ನಿರ್ಲಕ್ಷ್ಯ ಅಮಾನತಗೆ ಆಗ್ರಹ ಭೂಪುರ (ರಾ)ಗ್ರಾಮದ ಚರಂಡಿ ಸ್ವಚ್ಛಗೊಳಿಸಲು ಕರವೇ ಒತ್ತಾಯ



ಯುವಮಾರ್ಗ ಸುದ್ದಿ

**ಲಿಂಗಸುಗೂರು,ಜ.12–** ತಾಲೂಕಿನ ಮಾವಿನಭಾವಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಭೂಪೂರು (ರಾ) ಗ್ರಾಮದಲ್ಲಿ ಚರಂಡಿಗಳು ತುಂಬಿ, ಚರಂಡಿ ನೀರು ಮುಖ್ಯ ರಸ್ತೆಯ ಮೇಲೆ ಹರಿಯುತ್ತಿದ್ದು, ಕೂಡಲೇ ಚರಂಡಿಗಳನ್ನು ಸ್ವಚ್ಛಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಹೆಚ್.ಶಿವರಾಮೇಗೌಡ) ತಾಲೂಕು ಘಟಕದ ಕಾರ್ಯಕರ್ತರು ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ ಸಲ್ಲಿಸಿದರು.


ಚರಂಡಿ ನೀರು ರಸ್ತೆಯ ಮೇಲೆ ಹರಿಯುತ್ತಿರುವುದರಿಂದ ಶಾಲಾ ಮಕ್ಕಳು ತುಂಬ ತೊಂದರೆ ಅನುಭವಿಸುತ್ತಿದ್ದಾರೆ. ಕೆಲವು ಮಕ್ಕಳು ಕಾಲು ಜಾರಿ ಚರಂಡಿಯ ನೀರಿನಲ್ಲಿ ಬಿದ್ದು ಗಾಯ ಮಾಡಿಕೊಂಡ ಘಟನೆಗಳು ನಡೆದಿವೆ. ತುಂಬಿದ ಚರಂಡಿಗಳಿಂದಾಗಿ ಊರು ಗಬ್ಬು ನಾರುತ್ತಿದೆ. ಈ ಬಗ್ಗೆ ಪಂಚಾಯತಿ ಅಧಿಕಾರಿಗಳಿಗೆ ತಿಳಿಸಿದರೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದರೆ ನಮ್ಮ ಕರೆಗಳನ್ನು ಸ್ವೀಕರಿಸುತ್ತಿಲ್ಲ. ಇನ್ನು ಸಿಬ್ಬಂದಿಗಳಿಗೆ ತಿಳಿಸಿದರೆ ಚರಂಡಿ ಸ್ವಚ್ಛಗೊಳಿಸಲು ನಮಗೆ ಪಿಡಿಓ ತಿಳಿಸಿಲ್ಲ. ಕೇವಲ ಬಸ್ ನಿಲ್ದಾಣದಲ್ಲಿ ಮಾತ್ರ ಸ್ವಚ್ಛ ಮಾಡಲು ತಿಳಿಸಿದ್ದಾರೆ. ಅಲ್ಲಿಯೇ ಅಷ್ಟೇ ಸ್ವಚ್ಛ ಮಾಡುತ್ತೇವೆ. ಸಿಬ್ಬಂದಿಗಳು ಬೇಜಾವಾಬ್ದಾರಿಯ ಉತ್ತರ ನೀಡುತ್ತಿದ್ದಾರೆ. ಕಾರಣ ತುಂಬಿ ನಿಂತಿರುವ ಚರಂಡಿಗಳನ್ನು ಕೂಡಲೇ ಸ್ವಚ್ಛಗೊಳಿಸಬೇಕು, ಶಿಶು ಪಾಲನಾ ಕೇಂದ್ರವನ್ನು ವರ್ಷ ಪೂರ್ತಿ ತೆಗೆಯಬೇಕು ಹಾಗೂ ಗ್ರಾಮಸ್ಥರ ಮನವಿಗೆ ಸ್ಪಂದಿಸದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ತಾಲೂಕು ಅಧ್ಯಕ್ಷ ಮಾದೇಶ ಸರ್ಜಾಪೂರು, ಶರಣಬಸವ ಈಚನಾಳ, ಮುತ್ತಣ್ಣ ಗುಡಿಹಾಳ, ಹಾಂತೇಶ ಹೂಗಾರ, ಈಶ್ವರ ವಿಶ್ವಕರ್ಮ, ಪಂಪಣ್ಣ ಜಾಲಿಬೆಂಚಿ, ಶೇಖರ್, ಶರಣಪ್ಪ ಮಾಲಿ ಪಾಟೀಲ್ ಭೂಪೂರ, ವಿಜಯಕುಮಾರ ಕುರಿ, ಚಿದಾನಂದಯ್ಯ ಹಿರೆಮಠ, ಶಿವಪ್ಪ ಭೋವಿ, ದೇವಣ್ಣ ಪೂಜಾರಿ, ಬಸವರಾಜ, ಅಮರೇಶಮಾಲಿಪಾಟೀಲ್, ಅಮರೇಶ ಚಲುವಾದಿ,ಮಂಜುನಾಥ, ದೇವರಾಜ, ಗದ್ದೆಪ್ಪ, ನಿಂಗಣ್ಣ, ರಮೇಶ, ಅಣ್ಣಯ್ಯ ಭೋವಿ, ಶಿವರಾಜ, ರಮೇಶ, ನಾಗರಾಜ, ಹನುಮಂತ, ಕುಪ್ಪಣ್ಣ ಸೇರಿ ಇತರರು ಇದ್ದರು.

# ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ: ಭರತ್ ರೆಡ್ಡಿ

**ಬಳ್ಳಾರಿ, ಜ.12–** ನಗರದಲ್ಲಿ ಜ.1 ರಂದು ನಡೆದ ಬ್ಯಾನರ್, ಫೈರಿಂಗ್ ಗಲಾಟೆ ಪ್ರಕರಣ ಕುರಿತು ಇಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ನಗರದ ಶಾಸಕ ಭರತ್ ರೆಡ್ಡಿ ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆಂದಿದ್ದಾರೆ.

ಘಟನೆ ನಡೆದ ಹತ್ತು ದಿನಗಳ ಬಳಿಕ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಭೂಮಿ ಪೂಜೆ ನೆರವೇರಿಸಿದ ಭರತ್ ರೆಡ್ಡಿ. ಬ್ಯಾನರ್ ಗಲಾಟೆ ಪ್ರಕರಣದ ಬಗ್ಗೆ ಹೆಚ್ಚು ಮಾತನಾಡದೆ. ಪ್ರಕರಣವನ್ನು ಸಿಐಡಿ ತನಿಖೆಗೆ ನೀಡಿದೆ ಸರ್ಕಾರ. ತನಿಖೆ ನಡೆಯುತ್ತಿದೆ ಸತ್ಯಾಸತ್ಯತೆ ಹೊರ ಬರುತ್ತದೆ.ಕಾಲವೇ



ಎಲ್ಲದಕ್ಕೂ ಉತ್ತರ ನೀಡಲಿದೆಂದಿದ್ದಾರೆ.

ಕಾಂಗ್ರೆಸ್ ನಾಯಕರಿಗೆ ಪೊಲೀಸರು ನೋಟಿಸ್ ಕೊಟ್ಟಿದ್ದಾರೆಯೇ ಅನ್ನೋ ಪ್ರಶ್ನೆಗೆ ಸಮಯವೇ ಎಲ್ಲದಕ್ಕೂ ಉತ್ತರ ನೀಡುತ್ತದೆ ಎಂದರು.

# ನ.11 ರಂದು ಭಾರತ ರತ್ನ ಮೌಲಾನಾ ಅಬುಲ್ ಕಲಾಂ ಆಜಾದ್ ರವರ ಜಯಂತಿಯನ್ನು ಆಚರಿಸುವುದಕ್ಕೆ ಕ್ರಮ ಕೈಗೊಳ್ಳಬೇಕು: ಸೈಯಾದ್ ಹುಸೇನ್ ಸಾಹೇಬ್

ಯುವಮಾರ್ಗ ಸುದ್ದಿ

**ಮಾನ್ವಿ,ಜ.12–**ಪಟ್ಟಣದ ಪತ್ರಿಕಾ ಭವನದಲ್ಲಿ ಮೌಲಾನಾ ಅಬುಲ್ ಕಲಾಂ ಆಜಾದ್ ಬ್ರಿಗೇಡ್ ಜಿಲ್ಲಾಧ್ಯಕ್ಷರಾದ ಸೈಯಾದ್ ಹುಸೇನ್ ಸಾಹೇಬ್ ಮಾತನಾಡಿ ಭಾರತ ರತ್ನ ಮೌಲಾನಾ ಅಬುಲ್ ಕಲಾಂ ಆಜಾದ್ ರವರು ನಮ್ಮ ದೇಶದ ಸ್ವಾಂತ್ರ ಕ್ಕಾಗಿ ಹೋರಾಟ ಮಾಡಿದವರು ಹಾಗೂ ಸ್ವಾತಂತ್ರ ನಂತರದಲ್ಲಿ ಕೇಂದ್ರದ ಮೋದಲ ಶಿಕ್ಷಣ ಸಚಿವರಾಗಿ ದೇಶದ ಶೈಕ್ಷಣಿಕ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ ಇವರ ಸಾಧನೆಯನ್ನು ಗುರುತಿಸಿದ ಯು.ಪಿ.ಐ.ಸರ್ಕಾರದ ಪ್ರಧಾನಿ ಮನಮೋಹನ್ ಸಿಂಗ್ ರವರು ನ.11 ರಂದು ಭಾರತ ರತ್ನ ಮೌಲಾನಾ ಅಬುಲ್ ಕಲಾಂ ಆಜಾದ್ ರವರ ಜಯಂತಿಯನ್ನು ಆಚರಿಸುವುದಕ್ಕೆ ಅದೇಶ ನೀಡಿದರು ಕೂಡ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅವರ ಜಯಂತಿಯನ್ನು ಆಚರಿಸುವುದಕ್ಕೆ ಮುಂದಾಗುತ್ತಿಲ್ಲ ಅವರ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಯನ್ನು ಗೌರವಿಸುವ ಉದ್ದೇಶದಿಂದ ಪ್ರಾರಂಭಿಸಲಾದ ಮೌಲಾನಾ ಅಬುಲ್ ಕಲಾಂ ಆಜಾದ್ ಅಂಗ್ಲಮಾಧ್ಯಮ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಅಗತ್ಯ ಮೂಲ





ಸೌಲಭ್ಯಗಳನ್ನು ಕಲ್ಪಿಸಬೇಕು, ಸಿರವಾರ ಪಟ್ಟಣ ಹಾಗೂ ಕವಿತಾಳ ಗ್ರಾಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದವರು ಇರುವುದರಿಂದ ಅಲ್ಲಿನ ಮಕ್ಕಳ ವಿದ್ಯಾಭ್ಯಸಕ್ಕೆ ಅಗತ್ಯವಿರುವ ಉರ್ದು ಪ್ರೌಢಶಾಲೆಗಳನ್ನು ಅಭಿವೃದ್ಧಿ ಪಡಿಸಬೇಕು. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿನ ಅಲ್ಪಸಂಖ್ಯೆತ ಸಮುದಾಯದವರ ಸಮಸ್ಯೆಗಳ ನಿವಾರಣೆಗಾಗಿ ಜಿಲ್ಲಾ ಮಟ್ಟದ ಬೃಹತ್ ಸಮವೇಶವನ್ನು ಮೌಲಾನಾ ಅಬುಲ್ ಕಲಾಂ ಆಜಾದ್ ಬ್ರಿಗೇಡ್ ವತಿಯಿಂದ ಹಮ್ಮಿಕೊಳ್ಳಲಾಗುವುದು.ಎಂದು ತಿಳಿಸಿದರು.

ಗೌರವಾಧ್ಯಕ್ಷರಾದ ಇಸ್ಮಾಯಿಲ್ ಸಾಬ್ ತಾ.ಅಧ್ಯಕ್ಷರಾದ ಜಮೀಲ್ ಇಸ್ಮಾಯಿಲ್, ಉಪಾಧ್ಯಕ್ಷ ಸೈಯಾದ್ ಸಲೀಂ ಪಾಷಾ ಕಾರ್ಯದರ್ಶಿ ಅಜ್ಮೀರ್ ಪಾಷಾ, ನಗರ ಘಟಕದ ಅಧ್ಯಕ್ಷರಾದ ನಸಿರುದ್ದಿನ್ ಚೌದ್ರಿ ಇದ್ದರು.

# ದೇವದುರ್ಗ ಮತ್ತು ಸಿರವಾರ ಮುಖ್ಯರಸ್ತೆ ನೆನೆಗುದಿಗೆ ಬಿದ್ದ ರಸ್ತೆ ಕಾಮಗಾರಿ ವ್ಯಾಪಾರಸ್ಥರಿಗೆ, ಸವಾರರಿಗೆ ಕಿರಿಕಿರಿ

ಯುವಮಾರ್ಗ ಸುದ್ದಿ

**ದೇವದುರ್ಗ,ಜ.12–** ದೇವದುರ್ಗ ಮತ್ತು ಸಿರವಾರ ಮುಖ್ಯರಸ್ತೆ ಕಾಮಗಾರಿಯ ನಿಧಾನಗತಿಯ ಪರಿಣಾಮ ನಿತ್ಯ ದೂಳಿನಲ್ಲಿ ಅಂಗಡಿ ನಡೆಸುತ್ತಿದ್ದೇವೆ. ರಸ್ತೆ ಅಭಿವೃದ್ಧಿ ಕಾಮಗಾರಿ ಬೇಗನೆ ಮುಗಿಯುತ್ತಿಲ್ಲ. ಇದರಿಂದ ವ್ಯಾಪಾರ ವಹಿವಾಟು ಸರಿಯಾಗಿ ನಡೆಯುತ್ತಿಲ್ಲ. ರಸ್ತೆ ಕಾಮಗಾರಿಗೆ ಮರಂ ಆಕಿ ಅವಾಗೊಮ್ಮೆ ಇವಾಗೊಮ್ಮೆ ಅಷ್ಟೇ ನೀರು ಹೊಡೆಯುತ್ತಾರೆ. ಇದರಿಂದಾಗಿ ಮತ್ತಷ್ಟು ದೂಳಿನಲ್ಲಿ ಅಂಗಡಿ ನಡೆಸುವ ಅನಿವಾರ್ಯ ಎದುರಾಗಿದೆ' ಎನ್ನುತ್ತಾರೆ ರಸ್ತೆ ಬದಿಯ ವ್ಯಾಪಾರಸ್ಥರು ಮತ್ತು ದೊಡ್ಡ ದೊಡ್ಡ ಮಟ್ಟದ ತಗ್ಗುಗಳು ಇರುವದರಿಂದ ಸವಾರರು ಹರಸವಾಸ ಪಡುವಂತಾಗಿದೆ.ಅಪಘಾತಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ರಸ್ತೆ ಕಾಮಗಾರಿ ವೇಗ ಪಡೆದುಕೊಳ್ಳದ ಕಾರಣ ವಾಹನ ಸವಾರರು, ಪಾದಚಾರಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ರಸ್ತೆ ಬದಿಯಲ್ಲಿರುವ ಅಂಗಡಿಗಳ ವ್ಯಾಪಾರಸ್ಥರು ನಿತ್ಯ ದೂಳಿನಲ್ಲಿ ಮಿಂದೇಳಬೇಕಾಗಿದೆ.

ದೇವದುರ್ಗದಿಂದ ಸಿರವಾರ ವರೆಗೂ ನಡೆಯುತ್ತಿರುವ ಈ ಮುಖ್ಯ ರಸ್ತೆ ಕಾಮಗಾರಿ





ನಿಧಾನಗತಿಯಲ್ಲಿ ಸಾಗುತ್ತಿದೆ. ಇದರಿಂದ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಸಿರವಾರ ಮುಖ್ಯರಸ್ತೆ ಸಂಪೂರ್ಣ ದೂಳಿನಿಂದ ಕೂಡುತ್ತಿದ್ದು, ಹಾಗಾಗಿ ದೂಳಿನ ವಾತಾವರಣ ನಿರ್ಮಾಣವಾಗಿದೆ. ರಸ್ತೆ ಕಾಮಗಾರಿ ಮಾತ್ರ ನಿಧಾನಗತಿಯಲ್ಲಿ ಇದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ಯಾರೆ ಎನ್ನುತ್ತಿಲ್ಲ.

ಈಗಲಾದರೂ ಸಂಬಂಧಪಟ್ಟವರು ಇತ್ತ ಕಡೆ ಗಮನ ಹರಿಸಿ ಬೇಗ ರಸ್ತೆ ಅಭಿವೃದ್ಧಿ ಮಾಡಿ ಸವಾರರಿಗೆ ಹಾಗೂ ವ್ಯಾಪಾರಸ್ಥರಿಗೆ ಅನುಕೂಲ ಮಾಡಬೇಕು ಇಲ್ಲದಿದ್ದರೆ ರಸ್ತೆ ತಡೆದು ಹೋರಾಟ ಮಾಡಲಾಗುತ್ತದೆ ಎಂದು ಗ್ರಾಮಸ್ಥರು ಮತ್ತು ಸವಾರರು ಒತ್ತಾಯಿಸುತ್ತಾರೆ.



**ರಸ್ತೆ ಕಾಮಗಾರಿಯ ಗುತ್ತೇದಾರರು ಮರಂ ಹಾಕಿ ಹೋಗಿ ಮೂರು ತಿಂಗಳಾದರೂ ಕ್ಯಾರೆ ಅನ್ನುತ್ತಿಲ್ಲ ರಸ್ತೆ ದೂಳು ಮತ್ತು ದೊಡ್ಡ ದೊಡ್ಡ ಮಟ್ಟದ ತಗ್ಗುಗಳಿಂದ ಕೂಡಿದ್ದು ವ್ಯಾಪಾರಸ್ತರಿಗೆ ತುಂಬಾ ತೊಂದರೆ ಆಗುತ್ತದೆ ಅಷ್ಟೇ ಅಲ್ಲದೆ ದಿವಸ ನಾಲ್ಕು ಆರು ಗಾಡಿಗಳು ಅಪಘಾತ ವಾಗುತ್ತಿವೆ ಮೂರು ನಾಲ್ಕು ದಿವಸದಲ್ಲಿ ಕಾಮಗಾರಿ ಆರಂಭ ಮಾಡದಿದ್ದರೆ ರಸ್ತೆ ತಡೆದು ಹೋರಾಟ ಮಾಡಲಾಗುತ್ತದೆ.**

**ರಾಮಣ್ಣ ಪೂಜಾರಿ ಮಾನಸಗಲ್**

ಯುವ ಮಾರ್ಗ
www.yuvamarga.com Yuva Marga yuva_marga_

# ಮೊದಲನೇಯ ಪುಟದಿಂದ

## ಇತಿಹಾಸ ಬರೆದ ರಾಯಚೂರು ಮಹಾನಗರ ಪಾಲಿಕೆಯ ಸ್ವಚ್ಛತಾ ಓಟ

ಉತ್ಸವಕ್ಕೆ ಮತ್ತಷ್ಟು ಉತ್ಸಾಹ ಮತ್ತು ಜೋಷ್ ನೀಡಿತು. ಈ ಮೂಲಕ ರಾಯಚೂರು ನಗರವು ಒಗ್ಗಟ್ಟಿನ ಶಕ್ತಿ ಮತ್ತು ಸಕಾರಾತ್ಮಕ ಚಿಂತನೆಯೊಂದಿಗೆ ಮುಂದಿನ ಹೆಜ್ಜೆ ಇಡುತ್ತಿದೆ ಎಂಬ ಸಂದೇಶ ಸ್ಪಷ್ಟವಾಗಿ ಮೂಡಿಬಂದಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಕ್ಷು ಗಿರಿ, ಅಪರ ಜಿಲ್ಲಾಧಿಕಾರಿ ಶಿವಾನಂದ, ಮಹಾನಗರ ಪಾಲಿಕೆಯ ಸಮಿತಿ ಕಾರ್ಯದರ್ಶಿ ಹಾಗೂ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾಂವತಗೇರಿ, ಪಾಲಿಕೆಯ ಜೊನಲ್ 1ರ ಆಯುಕ್ತರಾದ ಪುಲಮ್ ಸಿಂಗ್, ಉಪ ಆಯುಕ್ತರಾದ ಸಂತೋಷ ರಾಣಿ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಸೀಲ್ದಾರ್ ಸುರೇಶ್ ವರ್ಮ, ಅರಕೇರಾ ತಹಶಿಲ್ದಾರ್ ಅಮರೇಶ ಬಿರಾದಾರ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವೀರೇಶ ನಾಯಕ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಓಟದಲ್ಲಿ ಭಾಗಿಯಾದರು. ಮುಖಂಡರಾದ ರವಿ ಭೋಸರಾಜ್, ಜಯಣ್ಣ ಸೇರಿದಂತೆ ಜಿಲ್ಲೆಯ ಅನೇಕ ಗಣ್ಯಮಾನ್ಯರು ಭಾಗಿಯಾಗಿ ಸ್ವಚ್ಛತಾ ಓಟಕ್ಕೆ ಸ್ಫೂರ್ತಿ ನೀಡಿದರು.

## ಕೋನಾಪುರ ಪೇಟೆಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸುವಂತೆ ಒಂದು ದಿನದ ಉಪವಾಸ ಸತ್ಯಾಗ್ರಹ: ಗುರುರಾಜ್ ನಾಗಲಾಪುರ್



ಯುವಮಾರ್ಗ ಸುದ್ದಿ

**ಮಾನ್ವಿ,ಜ.12–** ಪಟ್ಟಣದ ಕೋನಾಪುರ ಪೇಟೆಯಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಉಪವಾಸ ಸತ್ಯಾಗ್ರಹವನ್ನು ನಡೆಸಿ ಸಮಾಜ ಸೇವಕರಾದ ಗುರುರಾಜ್ ನಾಗಲಾಪುರ್ ಮಾತನಾಡಿ ಪಟ್ಟಣದ ಚೀಕಲಪರ್ವಿ ರಸ್ತೆಯಲ್ಲಿ ಬರುವ ಕೋನಾಪುರ ಪೇಟೆ ಅಭಿವೃದ್ಧಿಯಲ್ಲಿ ವಂಚಿತವಾಗಿದ್ದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರು ಕೂಡ ಸಂಬಂದಿಸಿದ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಚೀಕಲಪರ್ವಿ ರಸ್ತೆಯಲ್ಲಿ ಪ್ರತಿದಿನ ಬಾರಿ ವಾಹನಗಳ ಸಂಚಾರ ದಿಂದಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದರಿಂದ ವಾಹನ ದಟ್ಟಣೆ ನಿವಾರಣೆಗಾಗಿ ಬೈಪಾಸ್ ರಸ್ತೆಯನ್ನು ನಿರ್ಮಾಣ ಮಾಡಬೇಕು. ವೈಜ್ಞಾನಿಕ ಹಂಪ್‌ಗಳನ್ನು ಅಳವಡಿಸಬೇಕು.ಕೋಮಾಪುರ ಪೇಟೆ ವೃತ್ತದಲ್ಲಿ ಪೊಲೀಸ್ ಸಿಬ್ಬಂದಿಗಳ ನೇಮಕಮಾಡಬೇಕು, ಸಿ.ಸಿ.ಕ್ಯಾಮಾರ ಅಳವಡಿಸಬೇಕು, ಪುರಸಭೆ ವತಿಯಿಂದ ಪ್ರತಿದಿನ ಶುದ್ದವಾದ ಕುಡಿಯುವ ನೀರಿನ ಪೂರೈಕೆಗಾಗಿ ಕ್ರಮ ಕೈಗೊಳ್ಳಬೇಕು. ರಸ್ತೆಯಲ್ಲಿ ದೂಳು ಬಾರದಂತೆ ಸ್ವಚ್ಚತೆ ಕೈಗೊಳ್ಳಬೇಕು ನೀರು ಸಿಂಪರಣೆ ಮಾಡಬೇಕು, ಪ್ರವಾಸಿ ಮಂದಿರದ ಹತ್ತಿರವಿರುವ ಸರ್ಕಾರಿ ಜಾಗದಲ್ಲಿ ಉದ್ಯಾನವನ ನೀರ್ಮಾಣ ಮಾಡಬೇಕು, ವಾಕಿಂಗ್ ಪಥ ನಿರ್ಮಾಣ ಮಾಡಬೇಕು, ಆರೋಗ್ಯ ಇಲಾಖೆಯಿಂದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೌಲಭ್ಯ ಕಲ್ಪಿಸುವುದಕ್ಕಾಗಿ ಖಾಲಿ ಇರುವ ತಜ್ಞ ವೈದ್ಯರ ಹಾಗೂ ಸಿಬ್ಬಂದಿಗಳ ಹುದ್ದೆಗಳನ್ನು ತುಂಬುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು, ಪುರಸಭೆ ವತಿಯಿಂದ ಐತಿಹಾಸಿಕ ಸಂಜೀವರಾಯ ದೇವಸ್ಥಾನದ ಹತ್ತಿರ ತ್ಯಾಜ್ಯ ಸುರಿಯುತ್ತಿರುವುದರಿಂದ ಭಕ್ತರಿಗೆ ಅನಾನುಕೂಲವಾಗುತ್ತಿದ್ದು ತ್ಯಾಜ್ಯ ಸಂಗ್ರಹ ಕೇಂದ್ರವನ್ನು ಸ್ಥಳಾಂತರ ಮಾಡಬೇಕು ಎಂದು ಒತ್ತಾಯಿಸಿದರು.

ಬೇಕು. ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ವಾಲ್ಮೀಕಿ ಸಂಘದ ಜಿಲ್ಲಾಧ್ಯಕ್ಷರಾದ ರಾಮಣ್ಣ ನಾಯಕ, ವಿಶ್ವನಾಥ ರಾಯಪ್ಪ ವಕೀಲರು, ಸುದರ್ಶನ ವಕೀಲರು, ಕೆ,ಶಿವುಕುಮಾರ, ಚಂದ್ರ ಜಾನೆಕಲ್, ವೆಂಕಟೇಶ್,ವೀರೇಶ ಬುರಾಂಪುರ, ಮಂಜುನಾಥ ನಾಯಕ, ಬೆಳಗಿನ ಪೇಟೆ, ಹನುಮೇಶ ನಾಯಕ, ವೀರೇಶ,ಶಿವಪ್ಪ, ಆನಿಲ್ ಗೌಡ, ರೇಣುಕಾ ರಾಜ್,ಸೇರಿದಂತೆ ಕೋನಾಪುರ ಪೇಟೆಯ ಮುಖಂಡರು,ಸಾರ್ವಜನಿಕರು ಭಾಗವಹಿಸಿದರು.

## ಎಐ ಯುವತಿ ಬೆತ್ತಲೆ ಮೋಹ 1.5 ಲಕ್ಷ ಕಳಕೊಂಡ ಯುವಕ

**ಬೆಂಗಳೂರು, ಜ.12–** ಕೃತಕ ಬುದ್ದಿಮತ್ತೆ (ಎಐ) ಯುವತಿಯ ಮೋಹಕ್ಕೆ ಬಿದ್ದು ಯುವಕನೊಬ್ಬ ಒಂದೂವರೆ ಲಕ್ಷ ರೂ. ಹಣವನ್ನು ಕಳೆದುಕೊಂಡು ಕೇಂದ್ರ ವಿಭಾಗದ ಸೆನ್ ಠಾಣೆ ಪೊಲೀಸರ ಮೊರೆ ಹೋಗಿದ್ದಾನೆ. ನಗರದ 26 ವರ್ಷದ ಯುವಕನೊಬ್ಬ ಡೇಟಿಂಗ್ ಆಪ್‌ನಲ್ಲಿ ಖಾತೆ ತೆರೆದಿದ್ದು,ಆತನ ಖಾತೆಗೆ ಇಶಾನಿ ಎಂಬ ಯುವತಿಯಿಂದ ಫ್ರೆಂಡ್ ರಿಕ್ವೆಸ್ಟ್ ಬಂದಿದೆ. ಬಳಿಕ ಮೊಬೈಲ್ ನಂಬರ್ ನಂಬರ ವಿನಿಮಯ ಮಾಡಿಕೊಂಡು ಆಗಿ ಖಾಸಗಿ ವಿಚಾರಗಳನ್ನು ಚಾಟಿಂಗ್ ಮಾಡಿದ್ದರು.

ಕೆಲದಿನಗಳ ಹಿಂದೆ ಯುವತಿಯ ಮೊಬೈಲಿನಿಂದ ವಿಡಿಯೋ ಕಾಲ್ ಬಂದಿದ್ದು, ಅದರಲ್ಲಿ ಯುವತಿ ಬೆತ್ತಲಾಗಿದ್ದಳು. ನಂತರ ನೀನು ಬಟ್ಟೆ ಬಿಚ್ಚು ಎಂದು ಯುವಕನ ಬಟ್ಟೆ ಬಿಚ್ಚಿಸಿದ್ದಳು. ಯುವಕ ಬೆತ್ತಲಾಗಿದ್ದನ್ನು ರೆಕಾರ್ಡ್ ಮಾಡಿಕೊಂಡಿದ್ದ ಆರೋಪಿಗಳು ನಂತರ ಯುವಕನಿಗೆ ಆತನ ಬೆತ್ತಲೆ ಫೋಟೊಗಳನ್ನು ಕಳುಹಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದಾರೆ.ಯುವಕನಿಂದ ಹಂತ ಹಂತವಾಗಿ 1.53 ಲಕ್ಷ ರೂ. ವಸೂಲಿ ಮಾಡಿದ್ದು,ನೊಂದ ಯುವಕ ಕೇಂದ್ರ ಸೆನ್ ಠಾಣೆಗೆ ಯುವಕ ದೂರು ನೀಡಿದ್ದಾನೆ.

ಪ್ರಕರಣ ದಾಖಲು ಮಾಡಿಕೊಂಡ ಪೊಲೀಸರು, ಪ್ರಾಥಮಿಕ ತನಿಖೆಯಲ್ಲಿ ಎಐಯುವತಿ ಮೂಲಕ ಕೃತ್ಯ ಎಸಗಿರುವುದುಬೆಳಕಿಗೆ ಬಂದಿದ್ದು, ಪ್ರಕರಣ ದಾಖಲಿಸಿ ಆರೋಪಿಗಳಿಗೆ ಪೊಲೀಸರು ಹುಡುಕಾಟ ನಡೆಸಿದ್ದಾರೆ.

## ಜಾಹೀರಾತು ಬೋರ್ಡಿಗೆ ಬೈಕ್ ಡಿಕ್ಕಿ: ಸವಾರ ಸಾವು

**ಬೆಂಗಳೂರು,ಜ.12–**ವೇಗವಾಗಿ ಹೋಗುತ್ತಿದ್ದ ಬೈಕ್ ರಸ್ತೆ ಬದಿಯ ಬೋರ್ಡ್‌ಗೆ ಡಿಕ್ಕಿ ಹೊಡೆದು ಓರ್ವ ಮೃತಪಟ್ಟರೆ,ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ದುರ್ಘಟನೆ ಮಾದನಾಯಕನಹಳ್ಳಿಯ ಮಲ್ಲತಳ್ಳಿ ಬಳಿ ನಿನ್ನೆ ಮಧ್ಯರಾತ್ರಿ ನಡೆದಿದೆ. ಕಾರು ಶೋ ರೂಂನಲ್ಲಿ ಕೆಲಸ ಮಾಡುತ್ತಿದ್ದ ಸಂಜಯ್ (20) ಮೃತಪಟ್ಟವರು, ಗಂಭೀರ ವಾಗಿ ಗಾಯಗೊಂಡಿರುವ ಮಂಜುನಾಥ್ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇವರಿಬ್ಬರು ಬೈಕ್ ನಲ್ಲಿ ರಾತ್ರಿ 1ರ ವೇಳೆ ಮಲ್ಲತ್ತಹಳ್ಳಿ ಬಳಿಯ ಎಪಿಎಂಸಿ ಯಾರ್ಡ್ ಬಳಿ ಅತಿವೇಗವಾಗಿ ಹೋಗುತ್ತ ಆಯತಪ್ಪಿ ಜಾಹೀರಾತು ಬೋರ್ಡ್ ಗೆ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ಸಂಜಯ್ ಮೃತ ಪಟ್ಟರೆ ಮಂಜುನಾಥ್ ಗಂಭೀರ ಗಾಯಗೊಂಡಿದ್ದಾರೆ,ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ಮಾದನಾಯಕನಹಳ್ಳಿ ಪೊಲೀಸರು ಧಾವಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

ಡೈರಿ ನೌಕರ ಸಾವು:

ಮತ್ತೊಂದೆಡೆ ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಡೈರಿ ಸರ್ಕಲ್ ಬಳಿ ಇಂದು ಬೆಳಿಗ್ಗೆ 6.45ರ ವೇಳೆ ಅಪರಿಚಿತ ವಾಹನ ಸ್ಕೂಟರ್ ಗೆ ಡಿಕ್ಕಿ ಹೊಡೆದು ಡೈರಿ ನೌಕರ ಪ್ರಮೋದ್(29) ಮೃತಪಟ್ಟಿದ್ದಾರೆ. ರಾತ್ರಿ ಪಾಳಯದಲ್ಲಿ ಕೆಲಸ ಮುಗಿಸಿಕೊಂಡು ಪ್ರಮೋದ್ ಸುದ್ದಗುಂಟೆಪಾಳ್ಯದ ಮನೆಗೆ ಹೋಗುವ ಸಮಯದಲ್ಲಿ ಅಪಘಾತಕೀಡಾಗಿ ಮೃತಪಟ್ಟಿದ್ದಾರೆ.

ಮೈಕೋ ಲೇಔಟ್ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

## ಅರ್ಥಪೂರ್ಣ ವೇಮನ ಜಯಂತಿ ಆಚರಣೆಗೆ ನಿಧಾರ


**ಬೀದರ್: ಜ.12–**ನಗರದಲ್ಲಿ ಜ. 19 ರಂದು ಮಹಾ ಯೋಗಿ ವೇಮನ ಜಯಂತಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾ ರೆಡ್ಡಿ ಸಮಾಜದ ಅಧ್ಯಕ್ಷ ಶಂಕರ ರೆಡ್ಡಿ ಚಿಟ್ಟಾ ಹೇಳಿದರು.

ನಗರದ ಹೇಮರೆಡ್ಡಿ ಮಲ್ಲಮ್ಮ ಮಂದಿರದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲಾ ಆಡಳಿತ ವತಿಯಿಂದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಂದು ಬೆಳಿಗ್ಗೆ 10ಕ್ಕೆ ವೇಮನ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಲಿದೆ. ಬೆಳಿಗ್ಗೆ 11ಕ್ಕೆ ಹೇಮರೆಡ್ಡಿ ಮಲ್ಲಮ್ಮ ಸಮುದಾಯ ಭವನದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಸಮಾಜದವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸಮಾಜದ ಮುಖಂಡರಾದ ಸಂಗ್ರಾಮ ರೆಡ್ಡಿ, ಸಂಜು ರೆಡ್ಡಿ ತರ್ಶಾರೆ, ಜಗನ್ನಾಥ ರೆಡ್ಡಿ, ವೆಂಕಟರೆಡ್ಡಿ, ಬಾಬುರೆಡ್ಡಿ ಮೈಲೂರು, ಗೋಪಾಲ್ ರೆಡ್ಡಿ, ರವಿ ರೆಡ್ಡಿ, ನರಸಿಂಹ ರೆಡ್ಡಿ, ಪೆಂಟಾರೆಡ್ಡಿ, ಬಲವಂತ ರೆಡ್ಡಿ, ಮಹಿಪಾಲ್ ರೆಡ್ಡಿ, ಶಿವಾನಂದ ರೆಡ್ಡಿ, ರಾಜ ರೆಡ್ಡಿ, ಮಲರೆಡ್ಡಿ ಗುಂಡೂರ, ವೀರೂ ರೆಡ್ಡಿ ದಿಗ್ವಾಲ್, ಅಶೋಕ ರೆಡ್ಡಿ, ದತ್ತು ರೆಡ್ಡಿ ಮತ್ತಿತರರು ಇದ್ದರು.



# ದ್ವೇಷ ಭಾಷಣ ಪ್ರತಿಬಂಧಕ ಕಾಯ್ದೆ ವಾಪಸ್ ಕಳುಹಿಸಿ:ರಾಜ್ಯಪಾಲರಿಗೆ ಬಿಜೆಪಿ ಮನವಿ



**ಬೆಂಗಳೂರು, ಜ. 12–** ರಾಜ್ಯದ ಕಾಂಗ್ರೆಸ್ ಸರ್ಕಾರ ಜಾರಿ ಮಾಡಲು ಹೊರಟಿರುವ ದ್ವೇಷ ಭಾಷಣ ಪ್ರತಿಬಂಧಕ ಕಾಯ್ದೆಗೆ ಅಂಕಿತ ಹಾಕದಂತೆ ಬಿಜೆಪಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಚಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿ ನಾಯಕರುಗಳ ನಿಯೋಗ ಇಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ದ್ವೇಷ ಭಾಷಣ ತಡೆ ಮಸೂದೆಗೆ ಅಂಕಿತ ಹಾಕದಂತೆ ಮನವಿ ಮಾಡಿತು.

ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಪ್ರತಿಪಕ್ಷದ ವಿರೋಧದ ನಡುವೆಯೇ ರಾಜ್ಯ ಸರ್ಕಾರ ದ್ವೇಷ ಭಾಷಣ ಪ್ರತಿಬಂಧಕ ವಿಧೇಯಕಕ್ಕೆ ಅಂಗಿಕಾರ ಪಡೆದುಕೊಂಡಿದೆ. ಇದು

ದ್ವೇಷ ಭಾಷಣ ಮಸೂದೆ ಸಂವಿಧಾನದ ಮೂಲಭೂತ ಹಕ್ಕುಗಳಿಗೆ ವಿರುದ್ಧವಾಗಿದೆ. ಯಾವುದೇ ಕಾರಣಕ್ಕೂ ಈ ಮಸೂದೆಗೆ ಅಂಕಿತ ಹಾಕಬೇಡಿ ಎಂದು ಮನವಿ ಮಾಡಿದೆ.

ಸಂವಿಧಾನದ ಅನುಚ್ಛೇದ–14, 19 ಮತ್ತು 21 ಕ್ಕೆ ವಿರುದ್ಧವಾಗಿ ಈ ದ್ವೇಷ ಭಾಷಣ ಮಸೂದೆಯನ್ನು ರೂಪಿಸಲಾಗಿದೆ. ಈ ದ್ವೇಷ ಭಾಷಣ ಮಸೂದೆಯೂ ಸಮಾನ ಹಕ್ಕುಗಳು, ವಾಕ್ ಸ್ವಾತಂತ್ರ ಮತ್ತು ಅಭಿವ್ಯಕ್ತಿ ಸ್ವಾತಂತ್ರವನ್ನು ಹತ್ತಿಕ್ಕುವ ಮಸೂದೆಯಾಗಿದೆ.ಇದಕ್ಕೆ ಸಹಿ ಹಾಕದೆ ತಡೆ ಹಿಡಿಯಿರಿ ಎಂದು ರಾಜ್ಯಪಾಲರಲ್ಲಿ ಬಿಜೆಪಿ ನಾಯಕರು ಮನವಿ ಮಾಡಿದರು

ಭಾರತೀಯ ನ್ಯಾಯ ಸಮ್ಮಿತೆಯಲ್ಲಿ ದ್ವೇಷ ಭಾಷಣ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನು ಇರುವುದರಿಂದ ಇದಕ್ಕೆ ಪ್ರತ್ಯೇಕ ವಿಧೇಯಕ ಅವಶ್ಯವಿರುವುದಿಲ್ಲ. ಕಾಂಗ್ರೆಸ್ ಸರ್ಕಾರ ಈ ವಿಧೇಯಕವನ್ನು ಬಳಸಿ ರಾಜಕೀಯ ವಿರೋಧಿಗಳನ್ನು ದಮನ ಮಾಡುವ ಹುನ್ನಾರ ನಡೆಸಿದೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ರಾಜ್ಯಪಾಲರಿಗೆ ಸ ಲ್ಲಿಸಿರುವ ಮನವಿಯಲ್ಲಿ ಹೇಳಲಾಗಿದೆ.

ಈ ಕಾಯ್ದೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ಸಾಂವಿಧಾನಿಕ ಮೌಲ್ಯವನ್ನು ಎತ್ತಿ ಹಿಡಿಯಲು ಮತ್ತು ನ್ಯಾಯದ ಹಿತದೃಷ್ಟಿಯಿಂದ ಈ ವಿಧೇಯಕ ತಡೆಯುವುದು ಸೂಕ್ತ ಎಂದು ಬಿಜೆಪಿ ಹೇಳಿದೆ.

ಈ ಸಂದರ್ಭದಲ್ಲಿ ಶಾಸಕರಾದ ಎಸ್.ಆರ್. ವಿಶ್ವನಾಥ್, ಮುನಿರಾಜು, ಡಾ.ಸಿ.ಎನ್. ಅಶ್ವತ್ಥ್‌ನಾರಾಯಣ, ಭಾರತಿಶೆಟ್ಟಿ, ಸಿ.ಕೆ. ರಾಮಮೂರ್ತಿ, ಕೆ.ಎಸ್.ನವೀನ್, ಕೇಶವಪ್ರಸಾದ್, ಸಂಸದ ಗೋವಿಂದ ಕಾರಜೋಳ, ಪಿ.ಸಿ. ಮೋಹನ್, ಬಿಜೆಪಿ ಮುಖಂಡರಾದ ಸ ಪ್ತಗಿರಿಗೌಡ, ತಮ್ಮೇಶ್‌ಗೌಡ, ಎಸ್.ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

## ಟೆಕ್ಕಿ ಕೊಲೆಗೂ ಮುನ್ನ ಲೈಂಗಿಕ ದೌರ್ಜನ್ಯ ತನಿಖೆ ಚುರುಕು

**ಬೆಂಗಳೂರು,ಜ.12–** ಬೆಂಕಿ ಅವಘಡದಲ್ಲಿ ಉಸಿರುಗಟ್ಟಿ ಸಾಫ್ಟ್‌ವೇರ್ ಎಂಜಿನಿಯರ್ ಶರ್ಮಿಳಾ (34) ಮೃತಪಟ್ಟಿದ್ದ ಪ್ರಕರಣವು ಕೊಲೆಯೆಂದು ಸಾಬೀತಾಗಿದ್ದು ಬಂಧಿತ ಆರೋಪಿಯು,ಕೃತ್ಯಕ್ಕೂ ಮುನ್ನ ಆಕೆಯ ಮೇಲೆ ಅತ್ಯಾಚಾರ ನಡೆಸಿರುವ ಸಂಶಯವು ರಾಮಮೂರ್ತಿನಗರ ಪೊಲೀಸರ ತನಿಖೆಯಲ್ಲಿ ಪತ್ತೆಯಾಗಿದೆ.

ಕೊಲೆಗೂ ಮುನ್ನ ಸಂತ್ರಸ್ತೆ ಶರ್ಮಿಳಾ ಮೇಲೆ ಬಂಧಿತ ಆರೋಪಿ ಕೇರಳ ಮೂಲದ ಕೊಡಗು ಜಿಲ್ಲೆಯ ವಿರಾಜಪೇಟೆಯ ಅರಸುನಗರ ನಿವಾಸಿ ಕರ್ನಲ್ ಕುರೈ (18) ಅತ್ಯಾಚಾರ ಎಸಗಿರುವ ಸಾಧ್ಯತೆ ಇದೆ ಎನ್ನುವ ಅನುಮಾನ ಪೊಲೀಸರಿಗೆ ವ್ಯಕ್ತವಾಗಿದ್ದು,ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಆರೋಪಿ ವಿರುದ್ಧ ಈಗಾಗಲೇ ಕೊಲೆ ಪ್ರಕರಣದ ಜೊತೆಗೆ ಲೈಂಗಿಕ ದೌರ್ಜನ್ಯ ಪ್ರಕರಣವನ್ನೂ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಬಿಎನ್‌ಎಸ್ ಸೆಕ್ಷನ್ 103, 64(2), 67 ಮತ್ತು 238ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ತನಿಖೆ ವೇಳೆ ಕಳೆದ ಜ. 3ರ ರಾತ್ರಿ ಸುಮಾರು 9 ಗಂಟೆ ವೇಳೆಗೆ ಆರೋಪಿ ಕರ್ನಲ್ ಕುರೈ ಅಪಾರ್ಟ್‌ಮೆಂಟ್‌ನ ಸ್ಲೈಡಿಂಗ್ ವಿಂಡೋ ಮೂಲಕ ಶರ್ಮಿಳಾ ಮನೆಯೊಳಗೆ ನುಗ್ಗಿದ್ದಾಗ ಆಕೆ ಒಂಟಿಯಾಗಿರುವುದನ್ನು ಕಂಡು ದೌರ್ಜನ್ಯಕ್ಕೆ ಯತ್ನಿಸಿದಾಗ ಆಕೆ ತೀವ್ರವಾಗಿ ಪ್ರತಿರೋಧ ವ್ಯಕ್ತಪಡಿಸಿದ್ದಾಳೆ. ಪ್ರತಿರೋಧದ ವೇಳೆ ಆರೋಪಿ ಬಲವಂತವಾಗಿ ಆಕೆಯ ಮೇಲೆ ಎರಗಿದ್ದು, ಶರ್ಮಿಳಾ ಕೆಳಗೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾಳೆ. ತಲೆಗೆ ಪೆಟ್ಟು ಬಿದ್ದು ರಕ್ತಸ್ರಾವವಾಗಿ ಪ್ರಜ್ಞೆ ತಪ್ಪಿ ಬಿದ್ದ ಶರ್ಮಿಳಾಳನ್ನು ಬಳಿಕ ಉಸಿರುಗಟ್ಟಿಸಿ ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

**ಸಿಕ್ಕಿಬಿದ್ದ ಆರೋಪಿ:** ಕೊಲೆ ಮಾಡಿದ ಬಳಿಕ ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ರಕ್ತದಲ್ಲಿ ತೊಯ್ದ ಬಟ್ಟೆಗಳನ್ನು ಹಾಸಿಗೆಯ ಮೇಲೆ ಹಾಕಿ, ಕೋಣೆಗೆ ಬೆಂಕಿ ಹಚ್ಚಿ ಆರೋಪಿ ಪರಾರಿಯಾಗಿದ್ದಾನೆ. ಪರಾರಿ ವೇಳೆ ಕೊಂಡೊಯ್ದ ಶರ್ಮಿಳಾ ಮೊಬೈಲ್ ಆಧಾರವಾಗಿಯೇ ಆರೋಪಿ ಕರ್ನಲ್ ಕುರೈ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

**ಅತ್ಯಾಚಾರ ಗೊತ್ತಿಲ್ಲ:** ಆರೋಪಿಯನ್ನು ತೀವ್ರ ವಿಚಾರಣೆ ನಡೆಸಿ ಲೈಂಗಿಕ ದೌರ್ಜನ್ಯ ಕುರಿತು ಪ್ರಶ್ನಿಸಿದಾಗ 'ಗೊತ್ತಿಲ್ಲ ಎಂದು ನುಣುಚಿಕೊಳ್ಳುತ್ತಿದ್ದಾನೆ, ಹೀಗಾಗಿ ಸತ್ಯಾಂಶ ತಿಳಿಯಲು ಪೊಲೀಸರು ಎಫ್‌ಎಸ್‌ಎಲ್ ಪರೀಕ್ಷೆಗೆ ಮಾದರಿಗಳನ್ನು ಕಳುಹಿಸಿದ್ದಾರೆ. ಆರಂಭದಲ್ಲಿ ಈ ಘಟನೆ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಬೆಂಕಿ ಅವಘಡ ಎಂದು ಹೇಳಲಾಗಿತ್ತು. ಆದರೆ ಮರಣೋತ್ತರ ಪರೀಕ್ಷೆ ಹಾಗೂ ತನಿಖೆಯ ಬಳಿಕ ಇದು ಪೂರ್ವಯೋಜಿತ ಹತ್ಯೆ ಎಂಬುದು ಸ್ಪಷ್ಟವಾಗಿತ್ತು. ಟೆಕ್ಕಿ ಶರ್ಮಿಳಾಳನ್ನು ವನ್ ಸೈಡೆಡ್ ಲವ್ ಮಾಡಿದ್ದ ಆರೋಪಿ ಕೊಲೆ ಮಾಡಿದ್ದಾನೆ. ನಂತರ ಮನೆಗೆ ಬೆಂಕಿ ಹಚ್ಚಿ ತಪ್ಪಿಸಿಕೊಳ್ಳಲು ಯತ್ನಿಸಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಪ್ರಕರಣದ ತನಿಖೆ ಮುಂದುವರಿದಿದ್ದು, ಎಫ್‌ಎಸ್‌ಎಲ್ ವರದಿ ಬಂದ ಬಳಿಕ ಪ್ರಕರಣದ ಸಂಪೂರ್ಣ ಸತ್ಯಾಂಶ ಹೊರಬೀಳಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಆನ್‌ಲೈನ್‌ನಲ್ಲಿ ಉಡದ ಜನನಾಂಗ ಮಾರಾಟ ಮಾಂತ್ರಿಕ ಸೆರೆ

**ಬೆಂಗಳೂರು,ಜ.12–** ಮಾಂತ್ರಿಕ ಶಕ್ತಿಯಿದೆ ಎಂದು ನಂಬಿಸಿ ಉಡದ ಜನನಾಂಗಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುತ್ತಿದ್ದ ಮಾಂತ್ರಿಕನೋರ್ವ ಅರಣ್ಯಾಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದಾನೆ. ಪ್ರೀತಿಗಾಗಿ ವಶೀಕರಣ, ಪ್ರೇಮ ವಿವಾಹದ ಕಲಹಗಳಿಗೆ ಈ ಉಡ ಜನನಾಂಗವನ್ನು ನೀಡುತ್ತಿದ್ದ ಎಂದು ಹೇಳಲಾಗಿದೆ.

ಮಾಂತ್ರಿಕ ಶಕ್ತಿ ಇದೆ ಎಂದು ಹೇಳಿಕೊಂಡು ಜನರನ್ನು ನಂಬಿಸುತ್ತಿದ್ದ, ಪ್ರೇಮಿಗಳ ನಡುವಿನ ಘರ್ಷಣೆಯನ್ನು ಪರಿಹರಿಸಬಹುದು ಎಂದು ಹೇಳಿ ಪ್ರತಿ ತುಂಡನ್ನು 10 ಸಾವಿರ ರೂ.ಗೆ ಮಾರಾಟ ಮಾಡುತ್ತಿದ್ದನು.

ಈ ಬಗ್ಗೆ ಸುಳಿವು ಸಿಕ್ಕ ತಕ್ಷಣ, ಎನ್‌ಜಿಒವೊಂದು ತನಿಖೆ ಮಾಡಲು ವೈಯಕ್ತಿಕ ಸಮಸ್ಯೆ ಎಂದು ನಟಿಸಿ, ಈ ವ್ಯಕ್ತಿಯ ಬಳಿ ಹೋಗಿದ್ದಾರೆ. ಈ ವೇಳೆ ಈ ಮಾಂತ್ರಿಕನ ಕಳ್ಳಾಟ ಬಯಲಾಗಿದೆ. ಮಾಂತ್ರಿಕ ತನ್ನ ವನ್ಯಜೀವಿ ಉತ್ಪನ್ನಗಳ ಸಂಗ್ರಹವನ್ನು ಎನ್‌ಜಿಒ ಪ್ರತಿನಿಧಿಗೆ ತೋರಿಸಿದ್ದಾನೆ. ನಂತರ ಈ ವಿಷಯವನ್ನು ಕಂದಾಯ ಗುಪ್ತಚರ ನಿರ್ದೇಶನಾಲಯಕ್ಕೆ (ಡಿಆರ್‌ಐ) ವರದಿ ಮಾಡಲಾಯಿತು. ನಂತರ ಅವರನ್ನು ದಾಳಿ ಮಾಡಿ, ಸ್ವಯಂ ಘೋಷಿತ ಮಾಂತ್ರಿಕ ಬಂಧನ ಮಾಡಿದ್ದಾರೆ.

ಬಂಧಿತ ವ್ಯಕ್ತಿಯನ್ನು ಮೂರ್ತಿ (45) ಎಂದು ಗುರುತಿಸಲಾಗಿದೆ, ಸಾಮಾಜಿಕ ಜಾಲತಾಣದಲ್ಲಿ ಮೃದು ಹವಳ ಮತ್ತು ಇತರ ವನ್ಯಜೀವಿ ವಸ್ತುಗಳ ವ್ಯಾಪಾರ ಮಾಡುತ್ತಿದ್ದ, ಅದೃಷ್ಟ ಮತ್ತು ಸಮೃದ್ಧಿಗಾಗಿ ಮೃದುವಾದ ಹವಳವನ್ನು ತಾಲಿಸ್ಮನ್ ಆಗಿ ಮಾರಾಟ ಮಾಡುತ್ತಿದ್ದರು ಎಂದು ಆರೋಪಿಸಲಾಗಿದೆ. ಅನೇಕರು ಇದರ ಮಾರಾಟದ ಹಕ್ಕನ್ನು ಪಡೆದಿದ್ದರು. ಮೂರ್ತಿ ಈ ವನ್ಯಜೀವಿ ಉತ್ಪನ್ನಗಳನ್ನು ತಮಿಳುನಾಡು ಮತ್ತು ಇತರ ಪ್ರದೇಶಗಳಲ್ಲಿನ ಹಕ್ಕಿ ಪಿಕ್ಕಿ ಸಮುದಾಯದ ಸಂಪರ್ಕಗಳ ಮೂಲಕ ಪಡೆಯುತ್ತಿದ್ದ ಎಂದು ಹೇಳಲಾಗಿದೆ. ದೇಶಾದ್ಯಂತ ಸುಮಾರು 25 ಸಾವಿರ ಮಂದಿ ಈತನ ಭಕ್ತರಾಗಿದ್ದರು. ಅವರಲ್ಲಿ ಹಲವರು ಪ್ರೀತಿ ಅಥವಾ ವೈಯಕ್ತಿಕ ಸಮಸ್ಯೆಗಳಿಗಾಗಿ ಮೂರ್ತಿಯನ್ನು ಸಂಪರ್ಕಿಸಿದರು ಎಂದು ಹೇಳಲಾಗಿದೆ.

ಮೂರ್ತಿ ಆನ್‌ಲೈನ್ ವ್ಯವಹಾರದ ಬಗ್ಗೆ ಎನ್‌ಜಿಒ ಕೇರ್‌ಗೆ ಗುಪ್ತಚರ ಮಾಹಿತಿ ಬಂದ ನಂತರ ಕಾರ್ಯಾಚರಣೆ ಆರಂಭವಾಯಿತು. ಎನ್‌ಜಿಒ ಸದಸ್ಯರೊಬ್ಬರು ಮೂರ್ತಿಯ ಕ್ಲೈಂಟ್‌ನಂತೆ ನಟಿಸಿ ನಂತರ ನಾಗಶೆಟ್ಟಿಹಳ್ಳಿಯಲ್ಲಿರುವ ಮನೆಗೆ ಭೇಟಿ ನೀಡಿ, ನಂತರ ಪುರಾವೆಗಳನ್ನು ಸಂಗ್ರಹಿಸಲು ಸಹಾಯ ಮಾಡಿದ್ದಾರೆ. ದಾಳಿಯ ಸಮಯದಲ್ಲಿ, ಅಧಿಕಾರಿಗಳು 206 ಮಾನಿಟರ್ ಉಡ ಜನನಾಂಗಗಳು, 1.5 ಕೆಜಿ ಮೃದು ಹವಳ, ಹುಲಿ ಚರ್ಮ ಮತ್ತು ಇತರ ಧಾರ್ಮಿಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂರ್ತಿ ವಿರುದ್ಧ ವನ್ಯಜೀವಿ (ರಕ್ಷಣೆ) ಕಾಯ್ದೆಯ ಹಲವಾರು ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ವಶಪಡಿಸಿಕೊಂಡ ವನ್ಯಜೀವಿ ಉತ್ಪನ್ನಗಳನ್ನು ಹೆಚ್ಚಿನ ಪರೀಕ್ಷೆಗಾಗಿ ಬನ್ನೇರುಘಟ್ಟ ಅರಣ್ಯ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111,
9743496111

# ಶಿಕ್ಷಕರನ್ನು ಸ್ಮರಿಸಿದ ಮಲದಕಲ್ ಗೆಳೆಯರ ಬಳಗ



ಯುವಮಾರ್ಗ ಸುದ್ದಿ

**ದೇವದುರ್ಗ,ಜ.12–**ತಾಲೂಕಿನ ಮಲದಕಲ್ ಗ್ರಾಮದಲ್ಲಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿಧನರಾದ ನಿವೃತ್ತ ಮುಖ್ಯೋಪಾಧ್ಯಾಯರಾದ ದಿವಂಗತ. ಶ್ರೀ ಲಕ್ಷ್ಮಣ ಸರ್ ರವರ ನುಡಿ ನಮನ ಕಾರ್ಯಕ್ರಮವನ್ನು ಮಲದಕಲ್ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಸುಮಾರು 20ಕ್ಕೂ ಹೆಚ್ಚಿನ ವರ್ಷಗಳ ಕಾಲ ಮಲದಕಲ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ಮತ್ತು ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ ದಿವಂಗತ ಶ್ರೀ ಲಕ್ಷ್ಮಣ ಸರ್ ರವರು ತಮ್ಮ ಸೇವಾವಧಿಯಲ್ಲಿ ಮಲದಕಲ್ ಸೇರಿದಂತೆ ಸುತ್ತಲಿನ ಊರುಗಳ ಸಾವಿರಾರು ವಿದ್ಯಾರ್ಥಿಗಳ ಬದುಕು ಬೆಳಗಿ ಅವರ ಜೀವನವನ್ನು ರೂಪಿಸಿದ್ದಾರೆ.

ಈ ವೇದಿಕೆಯಲ್ಲಿ ಅವರ ಹಳೆಯ ವಿದ್ಯಾರ್ಥಿಗಳು ಮಾತನಾಡಿ , ದಿವಂಗತ ಶ್ರೀ ಲಕ್ಷ್ಮಣ ಸರ್ ರವರ ಹಳೆ ನೆನಪುಗಳನ್ನು ಮೆಲುಕು ಹಾಕುತ್ತಾ ಅವರ ಶೈಕ್ಷಣಿಕ ಕಾಳಜಿಯನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯ ಗುರುಗಳಾದ ಶ್ರೀ ಸುಧಾಕರ್ ವಹಿಸಿದ್ದರೆ, ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಲದಕಲ್ ಗೆಳೆಯರ ಬಳಗದ ಉಪಾಧ್ಯಕ್ಷರಾದ ಶ್ರೀ ರವಿಕುಮಾರ ಬಾಡಲ್ ಮಾತಾನಾಡಿದರು.

ಶಾಲೆಯ ಅತಿಥಿ ಶಿಕ್ಷಕರಾದ ಶ್ರೀ ಬಾಲಯ್ಯ ನಾಯಕ ಮತ್ತು ಪ್ರಶಾಂತ್ ನಾಯಕ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ರವಿಕುಮಾರ, ಶ್ರೀಮತಿ ಶಬೀನ್ ಮೇಡಂ, ಶ್ರೀಮತಿ ರೂಪಾ, ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರಾದ ಮಹೇಶ್ ವಿಶ್ವಕರ್ಮ, ನಿಂಗಪ್ಪ ಕರ್ಲಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ರವಿಚಂದ್ರ ಕಡೆಮನಿ, ಯುವ ಮುಖಂಡರಾದ ಭೀಮಶ್ ನಾಯಕ, ತಿಮ್ಮಪ್ಪ, ಆನಂದರೆಡ್ಡಿ, ವಿರುಪ್ಪಣ್ಣಗೌಡರು, ಹೆಚ್.ಎಲ್, ತಿಮ್ಮಣ್ಣ ನಾಯಕ

ವೈ. ಅಂಜನಯ್ಯ , ಮೋದಿ ಸಾಬ್ ನಾಗೋಲಿ, ಮಹೇಬೂಬ, ಶರಣಬಸವ, ಸೇರಿದಂತೆ ಶಾಲೆಯ ಅತಿಥಿ ಶಿಕ್ಷಕರು, ಗ್ರಾಮದ ಜನರು, ಮಲದಕಲ್ ಗೆಳೆಯರ ಬಳಗದ ಪದಾಧಿಕಾರಿಗಳು ಹಾಗೂ ಶಾಲಾ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಬಳಗಾನೂರು ಠಾಣೆಯ ಹಳೆಯ ಕಟ್ಟಡದ ಸ್ವಗತ






"ನಮಸ್ಕಾರ... ನಾನು ನಿಮ್ಮ ಬಳಗಾನೂರು ಪೊಲೀಸ್ ಠಾಣೆ. ಇನ್ನು ಕೆಲವೇ ದಿನಗಳಲ್ಲಿ ನಾನು ಕೇವಲ ಮಣ್ಣಿನ ರಾಶಿಯಾಗಬಹುದು ಅಥವಾ ನಿಮ್ಮ ನೆನಪುಗಳಲ್ಲಿ ಮಾತ್ರ ಉಳಿಯಬಹುದು.ಆದರೆ ನೆಲಸಮವಾಗುವ ಮುನ್ನ ನನ್ನ ಒಡಲಲ್ಲಿ ಅಡಗಿರುವ 90 ವರ್ಷಗಳ ಕಥೆಯನ್ನು ನಿಮಗೊಮ್ಮೆ ಹೇಳಲೇಬೇಕು.

ಬಳಗಾನೂರು ಒಂದು ಕಾಲದಲ್ಲಿ ವ್ಯಾಪಾರ ಮತ್ತು ಕೃಷಿ ಚಟುವಟಿಕೆಗಳ ಕೇಂದ್ರವಾಗಿತ್ತು. ಈ ಭಾಗದಲ್ಲಿ ಜನಸಂಖ್ಯೆ ಹೆಚ್ಚಾದಂತೆ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಬ್ರಿಟಿಷರ ಕಾಲದ ನಂತರದ ಆರಂಭಿಕ ದಶಕಗಳಲ್ಲಿ ನಾನು ತಲೆ ಎತ್ತಿದೆ.ಕಾಲಕ್ರಮೇಣ ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿದೆ.ನನ್ನ ಕಣ್ಗಾವಲಿಗೆ ಸುಮಾರು ಅರವತ್ತೆರಡು ಹಳ್ಳಿಗಳು ಬರುತ್ತವೆ.ಒಬ್ಬರು ಆರಕ್ಷಕ ಉಪನಿರೀಕ್ಷಕರು,ಇಬ್ಬರು ಸಹಾಯಕ ಉಪ ನಿರೀಕ್ಷಕರು,ಏಳುಜನ ಮುಖ್ಯ ಪೇದೆಗಳು,ಹಾಗೂ ಹದಿನೆಂಟು ಜನ ಪೊಲೀಸ್ ಪೇದೆಗಳೇ ನನ್ನ ಸೈನ್ಯ.ನಾನು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಆಯಕಟ್ಟಿನ ಸ್ಥಳದಲ್ಲಿದ್ದೇನೆ.ಈ ಭಾಗದಲ್ಲಿ ತುಂಗಭದ್ರಾ ಎಡದಂಡೆ ಕಾಲುವೆಯ ನೀರಾವರಿ ಪ್ರದೇಶವಿರುವುದರಿಂದ,ರೈತರ ನಡುವಿನ ನೀರಿನ ಹಂಚಿಕೆ ಗಲಾಟೆಗಳನ್ನೂ ನಿಯಂತ್ರಿಸಿದ್ದೇನೆ ನಾನು ಜನಿಸಿದ್ದು 1933 ರಲ್ಲಿ.ಅಂದರೆ, ಭಾರತಕ್ಕೆ ಇನ್ನೂ ಸ್ವಾತಂತ್ರ್ಯ ಸಿಕ್ಕಿರಲಿಲ್ಲ, ಬ್ರಿಟಿಷರ ಆಳ್ವಿಕೆಯ ಕಾಲವದು. ಅಂದಿನಿಂದ ಇಂದಿನವರೆಗೂ,ಈ ಒಂಬತ್ತು ದಶಕಗಳಲ್ಲಿ ನಾನು ಎಷ್ಟೊಂದು ಬದಲಾವಣೆಗಳನ್ನು ಕಂಡಿದ್ದೇನೆ ಅಲ್ಲವೇ? ಹೈದರಾಬಾದ್ ನಿಜಾಮರ ಕಾಲದ ಆಡಳಿತದಿಂದ ಹಿಡಿದು,ಭಾರತದ ಸ್ವಾತಂತ್ರ್ಯೋತ್ಸವದ ಸಂಭ್ರಮದವರೆಗೆ; ಕರ್ನಾಟಕ ಏಕೀಕರಣದ ಹೋರಾಟದಿಂದ ಹಿಡಿದು ಇಂದಿನ ಆಧುನಿಕ ಡಿಜಿಟಲ್ ಯುಗದವರೆಗೆ ಎಲ್ಲವನ್ನೂ ಕಣ್ಣಾರೆ ಕಂಡವನು ನಾನು.

ನಾನು ಕೇವಲ ಕಟ್ಟಡವಲ್ಲ ನನ್ನ ಗೋಡೆಗಳಲ್ಲಿ ಅಂಟಿಕೊಂಡಿರುವುದು ಹಳ್ಳಿಯ ಹಸಿವು,ಭಯ,ನಿರೀಕ್ಷೆ,ನ್ಯಾಯದ ಕನಸು.ರಾತ್ರಿ ಮೌನವಾಗಿದ್ದರೂನನ್ನೊಳಗೆ ಜಾಗೃತಿಯ ದೀಪ ಆರದು.ಅಳಲು ಕೇಳಿದರೆ ಬಾಗಿಲು ತೆರೆದು,ಅನ್ಯಾಯ ಕಂಡರೆ ಎದೆ ಗಟ್ಟಿ ಮಾಡಿಕೊಳ್ಳುತ್ತೇನೆ.ಕಳ್ಳತನದ ದೂರು ಬಂದ ದಿನಗಳಿವೆ, ಕಳೆದುಕೊಂಡ ಮಗುವಿನ ಕಣ್ಣೀರಿದೆ, ಸಂಧಿಯಲ್ಲೇ ಬಿದ್ದ ಬಡವನ ನಿಟ್ಟುಸಿರೂ ಇದೆ, ಹಾಗೇ ನ್ಯಾಯ ಸಿಕ್ಕಾಗ ಹರಿದ ಸಂತೋಷವೂ ಇದೆ. ನನ್ನ ಮೇಜಿನ ಮೇಲೆ ಇರುವ ಫೈಲುಗಳಿಗಿಂತ ಮಾನವನ ಜೀವವೇ ನನಗೆ ಮುಖ್ಯ.ಕಾನೂನು ನನ್ನ ಭಾಷೆ, ಮಾನವೀಯತೆ ನನ್ನ ಹೃದಯ. ಕೆಲವೊಮ್ಮೆ ನಿಂದನೆ ಕೇಳುತ್ತೇನೆ, ಕೆಲವೊಮ್ಮೆ ನಂಬಿಕೆ. ಆದರೂ ನಾನು ನಿಲ್ಲುತ್ತೇನೆ, ಗ್ರಾಮದ ರಕ್ಷಣೆಯ ಪ್ರತಿಜ್ಞೆಯೊಂದಿಗೆ. ನಾನು ಬಳಗಾನೂರು ಆರಕ್ಷಕ ಠಾಣೆ. ನ್ಯಾಯದ ಕಾವಲುಗಾರ, ಜನರ ನಂಬಿಕೆಯ ನೆರಳು.

ನನ್ನ ಗೋಡೆಗಳ ಮೇಲೆ ಎಷ್ಟೋ ಜನರ ಕಣ್ಣೀರು ಬಿದ್ದಿದೆ,ಎಷ್ಟೋ ಜನರಿಗೆ ನ್ಯಾಯ ಸಿಕ್ಕಾಗ ಅವರ ಮುಖದಲ್ಲಿ ಅರಳಿದ ನಗು ನನಗಷ್ಟೇ ಗೊತ್ತು.ಈ ಭಾಗದ ಎಷ್ಟೋ ರೌಡಿಗಳಿಗೆ ನನ್ನ ಹೆಸರು ಕೇಳಿದರೆ ನಡುಕ ಹುಟ್ಟುತ್ತಿತ್ತು,ಅದೇ ರೀತಿ ಅಸಹಾಯಕರಿಗೆ ನನ್ನ ಆವರಣದೊಳಗೆ ಬಂದಾಗ 'ರಕ್ಷಣೆ ಇದೆ' ಎಂಬ ಭರವಸೆ ಸಿಗುತ್ತಿತ್ತು. ಎಷ್ಟೋ ದಕ್ಷ ಅಧಿಕಾರಿಗಳು ನನ್ನ ಈ ಹಳೆಯ ಕೋಣೆಗಳಲ್ಲಿ ಕುಳಿತು ಜನಸೇವೆಯ ಪ್ರಮಾಣ ವಚನ ಸ್ವೀಕರಿಸಿದ್ದಾರೆ.ನೂರಾರು ಪೇದೆಗಳು ಹಗಲು–ರಾತ್ರಿ ಎನ್ನದೆ ನನ್ನ ನೆರಳಿನಲ್ಲಿ ವಿಶ್ರಮಿಸಿ, ನಾಡಿನ ಶಾಂತಿಗಾಗಿ ಶ್ರಮಿಸಿದ್ದಾರೆ. ಪ್ರಸ್ತುತ ಎರಿಯಪ್ಪ ಅಂಗಡಿಯ ವರು ಠಾಣಾಧಿಕಾರಿಗಳಾಗಿ ಅದೇ ಗತ್ತು ಗೈರತ್ತಿನಿಂದ ರಕ್ಷಣಾ ಕಾರ್ಯದ ಚುಕ್ಕಾಣಿ ಹಿಡಿದಿದ್ದಾರೆ. ಭೀಕರ ಬರಗಾಲ,ತುಂಗಭದ್ರೆಯ ಪ್ರವಾಹ ಮತ್ತು ಹಳ್ಳಿಗಳ ನಡುವಿನ ಸಣ್ಣಪುಟ್ಟ ಜಗಳಗಳನ್ನೆಲ್ಲ ನಾನು ಮೌನವಾಗಿ ಸಹಿಸಿಕೊಂಡಿದ್ದೇನೆ. ಈಗ ಕಾಲ ಬದಲಾ ಗಿದೆ.ನನ್ನ ಗೋಡೆಗಳು ಸಡಿಲವಾಗಿರಬಹುದು,ಮೇಲ್ಚಾವಣಿ ಯಿಂದ ನೀರು ಸೋರುತ್ತಿರಬಹುದು,ಸುಣ್ಣ–ಬಣ್ಣ ಮಾಸಿರಬ ಹುದು.ಆದರೆ ನನ್ನಲ್ಲಿರುವ ಆ 'ಗಾಂಭೀರ್ಯ' ಮಾತ್ರ ಹಾಗೆಯೇ ಇದೆ. ಇಂದು ನನ್ನ ಪಕ್ಕದಲ್ಲೇ ಅತ್ಯಾಧುನಿಕ ಸೌಲಭ್ಯಗಳಿರುವ ಹೊಸ ಕಟ್ಟಡ ತಲೆ ಎತ್ತುತ್ತಿದೆ.ಅದಕ್ಕೆ ಜಾಗ ಮಾಡಿಕೊಡಲು ನಾನು ಮಣ್ಣಾಗಲೇಬೇಕು.ಅದು ಪ್ರಕೃತಿ ನಿಯಮ. ನಾನು ಉರುಳಿ ಬಿದ್ದಾಗ ಕೇವಲ ಕಲ್ಲು, ಮಣ್ಣು ಸಿಗಲಿಕ್ಕಿಲ್ಲ; ಅದರ ಜೊತೆಗೆ ಈ ಭಾಗದ ಹಿರಿಯರ ಎಷ್ಟೋ ನೆನಪುಗಳು ಮಣ್ಣಲ್ಲಿ ಬೆರೆಯುತ್ತವೆ.ಹೊಸ ಕಟ್ಟಡ ಬಂದರೂ,1933 ರಿಂದ ನಾನು ಕಾಪಾಡಿಕೊಂಡು ಬಂದ ಆ 'ನ್ಯಾಯ ಮತ್ತು ಧರ್ಮ'ದ ಸಂಪ್ರದಾಯವನ್ನು ಹೊಸ ಗೋಡೆಗಳು ಮುಂದುವರಿಸಲಿ ಎಂಬುವುದೇ ನನ್ನ ಕೊನೆಯ ಆಸೆ.

ಹೋಗಿ ಬರುತ್ತೇನೆ... ನೆನಪಿಡಿ, ನಾನು ಕೇವಲ ಕಟ್ಟಡವಾಗಿರಲಿಲ್ಲ, ಬಳಗಾನೂರಿನ ಭದ್ರತೆಯ ಸಾಕ್ಷಿಯಾಗಿದ್ದೆ."

ಸ್ಟೋರಿ,ಸುರೇಶ ಬಳಗಾನೂರು.

# ವಿದ್ಯಾರ್ಥಿನಿಯ ಪತ್ತೆಗಾಗಿ ಸಹಕರಿಸಿ ಕಾಲೇಜಿಗೆ ಹೋದ ವಿದ್ಯಾರ್ಥಿನಿ ಕಾಣೆ , ಪ್ರಕರಣ ದಾಖಲು

ಯುವಮಾರ್ಗ ಸುದ್ದಿ



**ಲಿಂಗಸಗೂರು : ಜ 12–**.ಕಳಾಪುರ ಗ್ರಾಮದ ಅಮರೇಶ್ ತಂದೆ ವೀರಭದ್ರಪ್ಪ ಹೊಸಗೌಡ ಇವರ ಮಗಳಾದ ಮೇಘಶ್ರೀ ಎಂದಿನಂತೆ ಬೆಳಗ್ಗೆ ತಾನು ಓದುತ್ತಿರುವ ಜಿಟಿಟಿಸಿ ಕಾಲೇಜಿಗೆ ಹೋಗಿ ಬರುವುದಾಗಿ ಹೇಳಿ ಕಾಲೇಜಿನ ಸಮವಸ್ತ್ರವನ್ನು ಧರಿಸಿ ವಿದ್ಯಾರ್ಥಿನಿ ಬಸ್ ನ್ನು ಹತ್ತಿ ತಾನು ಓದುವ ಕಾಲೇಜಿಗೆ ಹೋಗಿದ್ದಾಳೆ ಆದರೆ ಸಂಜೆ ವೇಳೆಗೆ ಮನೆಗೆ ಬಾರದನ್ನು ಕಂಡು ಪೋಷಕರು ಹುಡುಕಾಡಿದರು ಸಿಗದೇ ಇದ್ದುದ್ದರಿಂದ ಲಿಂಗಸಗೂರು ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದಾರೆ .

ಕಾಣೆಯಾದ ವಿದ್ಯಾರ್ಥಿನಿಯ ಚಹಾರೆ ತೆಳ್ಳನೆಯ ಮೈಕಟ್ಟು ಗೋದಿ ಮೈಬಣ್ಣ , 5 ಫೀಟ್ ಎತ್ತರ , ಹಳದಿ ಕಾಲರ್ ಅರ್ದ ತೋಳಿನ ಶರ್ಟ, ಚಾಕಲೇಟ್ ಕಲರ್ ಪ್ಯಾಂಟ್ ಧರಿಸಿದ್ದಾರೆಂದು

ಪೋಷಕರ ದೂರಿನ ಮೇರೆಗೆ ಪೊಲೀಸ್ ಠಾಣೆ ಗುನ್ನೇ ನಂಬರ್ 07/2026 ಕಾಲಂ ವಿದ್ಯಾರ್ಥಿನಿಯ ಕಾಣೆಯಾದ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ . ಈ ವಿದ್ಯಾರ್ಥಿನಿಯ ಸುಳಿವು ಯಾರಿಗಾದರೂ ಕಂಡು ಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಬೇಕೆಂದು ತಿಳಿಸಿದ್ದಾರೆ .

# ಅಡವಿಸಿದ್ದೇಶ್ವರ ಜಾತ್ರಾಗೆ ಬೆಂಚಮರಡಿ ಗ್ರಾಮಸ್ಥರಿಂದ 10,000 ಶೇಂಗಾ ಹೋಳಿಗೆ

ಯುವಮಾರ್ಗ ಸುದ್ದಿ

**ಹಾಲಾಪೂರ,ಜ.12–** ಸಮೀಪದ ಉಟಕನೂರಿನ ಶ್ರೀ ಬಸವಲಿಂಗೇಶ್ವರ ದೇಶಿ ಕೇಂದ್ರ ಶಿವಯೋಗಿಗಳ 161ನೇ ಹಾಗೂ ಶ್ರೀ ಮರಿಬಸವಲಿಂಗೇಶ್ವರ ಮಹಾಸ್ವಾಮೀಜಿ 35 ನೇ ಪುಣ್ಯ ಸ್ಮರಣೆ ಅಂಗವಾಗಿ ನಡೆಯುವ ಜಾತ್ರೆಗೆ ಭಕ್ತರ ಸಾಗರವೇ ಹರಿದು ಉಟಕನೂರಿಗೆ ಆಗಮಿಸುವರು, ಅದಕ್ಕಾಗಿ ಮಹಾದಾಸೋಹ ಮೊದಲಿನಿಂದಲೂ ಪ್ರಸಿದ್ಧಿ ಪಡೆದಿದೆ.

ಈ ವರ್ಷ ಬೆಂಚಮರಡಿ ಸರ್ವಧರ್ಮ ಭಕ್ತಾದಿಗಳಿಂದ ಹತ್ತು ಸಾವಿರ ಶೇಂಗಾ ಹೋಳಿಗೆ ಮಾಡುವ ಮೂಲಕ ಭಕ್ತಿ ಮೆರೆದು, ಬೆಂಚಮರಡಿ ಗ್ರಾಮವನ್ನು ಪುನೀತಗೊಳಿಸಿದ್ದಾರೆ ಹೀಗಾಗಿ ಈ ವರ್ಷ ಶ್ರೀ ಮಠದಲ್ಲಿ ನಡೆಯುವ ಜಾತ್ರೆಗೆ ಮನಪೂರ್ವಕವಾಗಿ ಅನೇಕ ಗ್ರಾಮಗಳಿಂದ ಭಕ್ತಾದಿಗಳು ತರ ತರಹದ ಪ್ರಸಾದ್ ವ್ಯವಸ್ಥೆ ಮಾಡಿಕೊಂಡು ಶ್ರೀ ಅಡಿವಿಸಿದ್ದೇಶ್ವರ ಸುಕ್ಷೇತ್ರದಲ್ಲಿ ನಡೆಯುವ ಜಾತ್ರೆಗೆ ಬರುವ ಭಕ್ತರಿಗೆ ಸಿಹಿ ಪದಾರ್ಥ ಅನ್ನು ಸವಿಯುವ ಗಳಿಗೆಗೆ ಸಾಕ್ಷಿಯಾಗಿದ್ದು ವಿಶೇಷವಾಗಿದೆ ಎಂದೂ ಬೆಂಚಮರಡಿ ಗ್ರಾಮದ ಭಕ್ತಾರಾದ ಶ್ರೀ ಮಲ್ಲಯ್ಯ ಸ್ವಾಮಿ ಅವರು ಪಾಟೀಲ್ ನ್ಯೂಸ್ ಅಲರ್ಟ್ ಸುದ್ದಿಯೊಂದಿಗೆ ಮಾತನಾಡಿದರು.



ನಂತರ ಶ್ರೀ ಮಠದ ಪೂಜ್ಯರಾದ ಶ್ರೀ ಮರಿಬಸವರಾಜ ದೇಶಿಕೇಂದ್ರ ಶಿವಯೋಗಿಗಳು ಮಾತನಾಡಿ ಶ್ರೀಮಠದಲ್ಲಿ ನಡೆಯುವ ಜಾತ್ರೆಗೆ ಬೆಂಚಮರಡಿ ಹಾಗೂ ಅನೇಕ ಗ್ರಾಮಗಳಿಂದ ಸರ್ವಧರ್ಮ ಭಕ್ತಾದಿಗಳು ಶೇಂಗಾ ಹೋಳಿಗೆ ಮತ್ತಿತರ ಸಿಹಿ ಪದಾರ್ಥಗಳನ್ನು ಸೊ ಇಚ್ಛೆಯಿಂದ ಮಹಾಪ್ರಸಾದ ವ್ಯವಸ್ಥೆ ಮಾಡಿದ್ದು ಸಂತೋಷದ ವಿಚಾರ, ಎಲ್ಲಾ ಭಕ್ತಾದಿಗಳಿಗೆ ಮತ್ತಷ್ಟು ಭಗವಂತ ಉತ್ತಮ ಆರೋಗ್ಯ, ಮಳೆ ಬೆಳೆ ಕೊಟ್ಟು ಕಾಪಾಡಲಿ ಎಂದು ಆಶೀರ್ವದಿಸಿದರು.

# ಪ.ಪಂ ಅಧ್ಯಕ್ಷ ಸ್ಥಾನಕ್ಕೆ 20ರಂದು ಚುನಾವಣೆ

ಯುವಮಾರ್ಗ ಸುದ್ದಿ

**ಸಿರವಾರ,ಜ.12–** ರಾಜೀನಾಮೆಯಿಂದ ತೆರವಾದ ಇಲ್ಲಿಯ ಪಟ್ಟಣ ಪಂಚಾಯಿತಿ ಅಧ್ಯಕ್ಷ ಸ್ಥಾನಕ್ಕೆ ಜನವರಿ 20ರಂದು ಚುನಾವಣೆ ನಿಗದಿಯಾಗಿದ್ದು, ಆಕಾಂಕ್ಷಿಗಳ ನಡುವೆ ಪೈಪೋಟಿ ತೀವ್ರಗೊಂಡಿದೆ.20 ಸದಸ್ಯರ ಸಂಖ್ಯಾ ಬಲದ ಪಟ್ಟಣ ಪಂಚಾಯಿತಿಯಲ್ಲಿ 20 ಜನ ಸದಸ್ಯರಲ್ಲಿ 9 ಕಾಂಗ್ರೆಸ್ ಬೆಂಬಲಿತ, 6 ಬಿಜೆಪಿ, ಜೆಡಿಎಸ್ 3 ಹಾಗೂ ಇಬ್ಬರು ಪಕ್ಷೇತರ ಸದಸ್ಯರು ಇದ್ದಾರೆ.ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವ ಅಧ್ಯಕ್ಷ ಸ್ಥಾನಕ್ಕೆ ಮೊದಲ ಅವಧಿಗೆ ವೈ.ಭೂಪನಗೌಡ ಟಾಸ್ ಮೂಲಕ ಅಧ್ಯಕ್ಷರಾಗಿದ್ದರು.ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಹಾಲಿ ಅಧ್ಯಕ್ಷ ವೈ.ಭೂಪನಗೌಡ ಅವರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದಾರೆ.

ಮೊದಲ ಅವಧಿಯ ಇನ್ನುಳಿದ 15 ತಿಂಗಳ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲಿತರ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ. ಕಾಂಗ್ರೆಸ್‌ನಿಂದ ಹಸೇನ ಅಲಿಸಾಬ, ಹಾಜಿಚೌದ್ರಿ, ಸೂರಿ ದುರುಗಣ್ಣ ನಾಯಕ, ಮೌಲಾಸಾಬ ವರ್ಚಸ್ ಅವರು ಹೈಕಮಾಂಡ್ ಮನವೊಲಿಸಲು ಮುಂದಾಗಿದ್ದಾರೆ. 12ನೇ ವಾರ್ಡ್‌ಗೆ ನಡೆದಿದ್ದ ಉಪ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಜ್ಯೋತಿ ದಾನನಗೌಡ ಅವರಿಗೆ ಹೈಕಮಾಂಡ್ ಮಣೆ ಹಾಕಿದರೆ ಅಚ್ಚರಿ ಪಡಬೇಕಾಗಿಲ್ಲ.

ಬಿಜೆಪಿಯಿಂದಲೂ ಕೃಷ್ಣ ನಾಯಕ ಮತ್ತು ಸಂದೀಪ ಪಾಟೀಲ ಆಕಾಂಕ್ಷಿಗಳಾಗಿದ್ದು, ಪಕ್ಷೇತರರ ಬೆಂಬಲದೊಂದಿಗೆ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.ಅಧ್ಯಕ್ಷರ ಚುನಾವಣೆಗೆ 20 ಸದಸ್ಯರು, ಸಂಸದ, ಶಾಸಕ ಸೇರಿದಂತೆ 22 ಮತದಾರರಿದ್ದು, ಇಬ್ಬರು ಪಕ್ಷೇತರರೇ ನಿರ್ಣಾಕವಾಗಲಿದ್ದಾರೆ.ಕಾಂಗ್ರೆಸ್ 9 +2 ಒಟ್ಟು 11, ಬಿಜೆಪಿ–ಜೆಡಿಎಸ್ ಮೈತ್ರಿಯಿಂದ 6+3=9 ಮತ್ತು ಇಬ್ಬರು ಪಕ್ಷೇತರರು ಸೇರಿ 11 ಆಗಲಿದ್ದು, ಇದೇ ರೀತಿ ಬೆಂಬಲ ವ್ಯಕ್ತವಾದರೆ ಅತೃಪ್ತ ಆಕಾಂಕ್ಷಿಗಳ ಬೆಂಬಲದಿಂದ ಅಧ್ಯಕ್ಷರಾಗುವ ತವಕದಲ್ಲಿದ್ದಾರೆ.

# ಸ್ವದೇಶಿ ಬಳಸಿ ದೇಶ ಬೆಳೆಸಿ ನಿವೃತ್ತ ಯೋಧರಿಂದ ಸ್ವದೇಶಿ ಜಾಗರಣ ಸೈಕಲ್ ಜಾಗೃತಿ ಜಾಥ

ಯುವಮಾರ್ಗ ಸುದ್ದಿ

**ಮಾನ್ವಿ,ಜ.12–** ಶ್ರೀ ಪರಿಪೂರ್ಣ ಸಾನತನ ಚಾರಿಟಬಲ್ ಟ್ರಸ್ಟ್ ಹಾಗೂ ನಿವೃತ್ತ ಯೋಧರಿಂದ ಸ್ವದೇಶಿ ಜಾಗರಣ ಸೈಕಲ್ ಜಾಗೃತಿ ಜಾಥ ತಂಡದ ಸದಸ್ಯರು ಇಂದು ಪಟ್ಟಣಕ್ಕೆ ಆಗಮಿಸಿ ಕಾಕತೀಯ ಶಿಕ್ಷಣ ಸಂಸ್ಥೆಯ ವಸತಿ ನಿಲಯದ ಮಕ್ಕಳಿಗೆ ಜಾಗೃತಿ ಮೂಡಿಸಿ ಭಾರತೀಯ ಸೇನೆಯ ನಿವೃತ್ತ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಮಾತನಾಡಿ ಶ್ರೀ ಪರಿಪೂರ್ಣ ಸಾನತನ ಚಾರಿಟಬಲ್ ಟ್ರಸ್ಟ್ ಹಾಗೂ ಮಾಜಿ ಯೋಧರಿಂದ ಜನರಲ್ಲಿ ಸ್ವದೇಶಿ ವಸ್ತುಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ನಿವೃತ್ತ ಭಾರತೀಯ ಸೇನೆಯ ಯೋಧರೊಂದಿಗೆ ಬೆಂಗಳೂರಿನ ನೆಲಮಂಗಲದಿಂದ ಸೈಕಲ್ ಜಾಗೃತಿ ಜಾಥವನ್ನು ಪ್ರಾರಂಭಿಸಿ ರಾಜ್ಯದ 22 ಜಿಲ್ಲೆಗಳಲ್ಲಿ ಒಟ್ಟು 2650 ಕಿ.ಮೀ.ದೂರವನ್ನು ಸೈಕಲ್ ಮೂಲಕ ಸಂಚಾರಿಸಿ ಮಾರ್ಗದಲ್ಲಿ ಬರುವ ತಾಲೂಕು ಹಾಗೂ ಗ್ರಾಮಗಳಲ್ಲಿನ ಜನರಿಗೆ ಹಾಗೂ ಶಾಲೆಗಳ ವಿದ್ಯಾರ್ಥಿಗಳಿಗೆ ಸ್ವದೇಶಿ ವಸ್ತುಗಳ ಬಳಕೆಯಿಂದ ದೇಶದ ಬೆಳವಣಿಗೆ ಯಾಗುತ್ತದೆ ಎನ್ನುವ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಇನ್ನು 10 ದಿನಗಳಲ್ಲಿ 7 ಜಿಲ್ಲೆಗಳಲ್ಲಿ ಸಂಚರಿಸಿ ಮರಳಿ ಬೆಂಗಳೂರಿನಲ್ಲಿ ಜಾಗೃತಿ ಜಾಥ ಮುಗಿಸಲಾಗುವುದು.

ನಮ್ಮ ದೇಶದಲ್ಲಿ ನಮ್ಮ ರೈತರು ಉತ್ಪದಿಸುವ ಆಹಾರ ಧಾನ್ಯಗಳನ್ನು ವಸ್ತುಗಳನ್ನು ,ಸ್ವದೇಶಿ ಉತ್ಪನ್ನಗಳನ್ನು ಬಳಸದೆ ಇದ್ದಲ್ಲಿ ನಮ್ಮ ರೈತರು,ಕಾರ್ಮಿಕರು ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ವಿದೇಶಿ ವಸ್ತುಗಳನ್ನು ಹೆಚ್ಚಾಗಿ ಬಳಸುವುದರಿಂದ ನಮ್ಮ ಸಂಪತ್ತು ವಿದೇಶಗಳಿಗೆ ಸೇರುತ್ತದೆ. ನಮ್ಮ ವಸ್ತುಗಳನ್ನು ಬಳಸಿ ನಮ್ಮ ಸಂಪತ್ತು ನಮ್ಮಲಿ ಉಳಿಸಿಕೊಳೋಣ ಎನ್ನುವ ಉದ್ದೇಶದಿಂದ ದೇಶದ ಪ್ರಾಧಾನಿಗಳು ಮೇಕ್ ಇನ್ ಇಂಡಿಯ ಪರಿಕಲ್ಪನೆಯನ್ನು ನಮಗೆ ನೀಡಿದ್ದಾರೆ ನಾವು ಹೋರಾಟದಿಂದ ಗಳಿಸಿದ ಸ್ವಾತಂತ್ರದ ರಕ್ಷಣೆಗಾಗಿ ನಮ್ಮ ದೇಶದ ಗಡಿಯಲ್ಲಿ ಯೋಧರು ಹಗಲಿರುಳು ಶ್ರಮಿಸುತ್ತಿದ್ದಾರೆ. ಅದ್ದರಿಂದ ನಮ್ಮಗೆ ಅಗತ್ಯವಿರುವ ವಸ್ತುಗಳನ್ನು ನಾವೆ ತಯಾರಿಸಿಕೊಂಡು ಬಳಸಿಕೊಳೋಣ ನಮ್ಮ



ಆರ್.ಬಿ.ಐ.ರೂಪಿಸಿದ ಭಾರತ ಆಫ್,ಭಿಮ ಆಪ್ ಬಳಸೋಣ ಎಂದು ಕರೆ ನೀಡಿದರು.

ನಿವೃತ್ತ ಉಪಕಾರ್ಯದರ್ಶಿ ರಮೇಶ ನರಸಿಂಹ, ನಿವೃತ್ತ ಭಾರತೀಯ ಸೇನೆಯ ಅಧಿಕಾರಿ ಕರ್ನಾಲ್ ಖಂಡಸ್ವಾಮಿ, ಕಾಮೆಂಡರ್ ನಿಲಕಂಠ,ಡಾ.ಗೋಪಾಲಕೃಷ್ಣ ಪಿಳ್ಳೈ,ಕ್ಯಾಪ್ಟನ್ ಡಾ.ನೆಡುನಚಿಜೀಯನ್, ಸಹಸ್ರನಾಮಮಿಯಾರ್, ಬಾಬು ಕಮಲಕಾರ್ , ವಾಣಿಜ್ಯೋದ್ಯಮಿ ಹೆಮಂತ್ ಜಾದವ್, ಸಿವೀಲ್ ಇಂಜಿನಿಯರ್ ಸಾಗರ್ ದೇವರಾಜ, ರವರ ತಂಡದಿಂದ ಸೈಕಾಲ್ ಜಾಥ ಮೂಲಕ ಸ್ವದೇಶಿ ಬಳಸಿ ದೇಶಬೆಳೆಸಿ ಎನ್ನುವ ಘೋಷ ವಾಕ್ಯದೊಂದಿಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಡೆಯಿತು.

ಕಕಾತೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಗೋಡವರ್ತಿ ಸತ್ಯನಾರಾಯಣ, ಕಾರ್ಯದರ್ಶಿ ಜಿ. ಶ್ರೀನಿವಾಸ, ಸುಬ್ಬರಾವ್ ಚೌದ್ರಿ,ಉಪಾಧ್ಯಕ್ಷರಾದ ಪುಟ್ಟಪ್ರಸಾದ್, ಎಂ.ಆರ್.ರಾಜು, ಪಣಿಕುಮಾರ, ನಾಗೇಶ್ವರರಾವ್, ದೊರೆಬಾಬು, ಬಿ.ಟಿ. ಸತ್ಯನಾರಾಯಣ, ಜಿ,ಶ್ರೀನಿವಾಸ, ಎಸ್.ರಮೇಶ, ಪಂಡು, ಕಕಾತೀಯ ಶಾಲೆಯ ಮುಖ್ಯಗುರು ವೀರಭದ್ರಗೌಡ ಸೇರಿದಂತೆ ವಸತಿ ಶಾಲೆಯ ವಿದ್ಯಾರ್ಥಿಗಳು ಇದ್ದರು.

ಯುವ ಮಾರ್ಗ
www.yuvamarga.com Yuva Marga yuva_marga_

# ರಾಯಚೂರು ಉತ್ಸವ: ಜನವರಿ 25ರಂದು ಸೈಕ್ಲಿಂಗ್ ಮ್ಯಾರಥಾನ್

**ರಾಯಚೂರು,ಜ.12–** ರಾಯಚೂರು ಜಿಲ್ಲೆಯಲ್ಲಿ ಜನವರಿ–2026ರ ಮಾಹೆಯಲ್ಲಿ ಜರುಗುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ. ಜನವರಿ 25ರ ಬೆಳಗ್ಗೆ 9 ಗಂಟೆಗೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸೈಕ್ಲಿಂಗ್ ಮ್ಯಾರಥಾನ್ ಸ್ಪರ್ಧೆ ಆಯೋಜನೆ ಮಾಡಲಾಗಿದೆ. ಆಸಕ್ತರು ಈ ಸ್ಪರ್ಧೆಯ ನೋಡಲ್ ಅಧಿಕಾರಿಗಳಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರ ಮೊಬೈಲ್ ಸಂಖ್ಯೆ: 9972316898 ಅಥವಾ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ವಿಜಯಶಂಕರ್ ಮೊಬೈಲ್ ಸಂಖ್ಯೆ: 9448427601ಗೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದಾಗಿದೆ.

ಈ ಕ್ರೀಡೆಗಳಲ್ಲಿ ಆಸಕ್ತರು ಭಾಗವಹಿಸಿ ರಾಯಚೂರು ಜಿಲ್ಲೆ ಹೆಮ್ಮೆಪಡುವಂತಹ ಕ್ರೀಡೋತ್ಸವ ಮೂಡಿಬರಲು ಸಹಕರಿಸಿ ರಾಯಚೂರು ಉತ್ಸವವನ್ನು ಯಶಸ್ವಿಗೊಳಿಸಲು ಎಲ್ಲಾ ಕ್ರೀಡಾಪಟುಗಳು ಮತ್ತು ಸಾರ್ವಜನಿಕರಲ್ಲಿ ವಿನಂತಿಸಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಯಚೂರು ಮಹಾನಗರ ಪಾಲಿಕೆಯಿಂದ

# ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಡಿ ಅರ್ಜಿ ಆಹ್ವಾನ

**ರಾಯಚೂರು,ಜ.12–** ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯಿಂದ 2019–20 ಹಾಗೂ 2024–25ನೇ ಸಾಲಿನ ಎಸ್.ಎಫ್.ಸಿ ನಿಧಿಯ ಶೇ.5ರ ಪರಿಷ್ಕೃತ ಕ್ರಿಯಾ ಯೋಜನೆಯಡಿ ವಿಕಲಚೇತನರ ಕಲ್ಯಾಣ ಕಾರ್ಯಕ್ರಮಗಳಡಿ ಪಾಲಿಕೆ ವ್ಯಾಪ್ತಿ ಪ್ರದೇಶದಲ್ಲಿ ಬರುವ ಅರ್ಹ ಫಲಾನುಭವಿಗಳಿಗೆ ವಿವಿಧ ಸೌಲಭ್ಯ ಒದಗಿಸಲು ಅರ್ಜಿ ಆಹ್ವಾನಿಸಲಾಗಿದೆ.

2019–20 ಸಾಲಿನ ಶೇ.5ರಡಿ ಪರಿಶಿಷ್ಟ ಜಾತಿಯ ವಿಕಲಚೇತನರ ಮನೆಯ ಮೇಲ್ಛಾವಣೆ ದುರಸ್ಥಿಗಾಗಿ 2ಲಕ್ಷ ರೂ.ಗಳು ಹಾಗೂ 2024–25ನೇ ಸಾಲಿನ ಶೇ.5ರಡಿ ಪರಿಶಿಷ್ಟ ಜಾತಿಯ ವಿಕಲಚೇತನರ ಮನೆಯ ಮೇಲ್ಛಾವಣೆ ದುರಸ್ಥಿಗಾಗಿ 1.15ಲಕ್ಷ ರೂ.ಗಳನ್ನು ಕಾಯ್ದಿಸಲಾಗಿದೆ.

ದಾಖಲಾತಿಗಳು: ನಿಗದಿತ ನಮೂನೆಯಲ್ಲಿ ಅರ್ಜಿ, ದೃಢೀಕೃತ ಜಾತಿ ಮತ್ತು ಅದಾಯ ಪ್ರಮಾಣ ಪತ್ರ (ಪ್ರಸಕ್ತ ಚಾಲ್ತಿ ಸಾಲು), ದೃಢೀಕೃತ ವಾಸಸ್ಥಳಕ್ಕೆ ಗುರುತಿನ ಚೀಟಿ/ರೇಷನ್ ಕಾರ್ಡ್, ಪಾಸ್ ಫೋಟೋ ಅಳತೆಯ 2 ಭಾವ ಚಿತ್ರ, ಬ್ಯಾಂಕ್ ಪಾಸ್ ಪುಸ್ತಕ್ ಹಾಗೂ ಐ.ಎಫ್.ಎಸ್.ಸಿ ಕೋಡ್‌ನೊಂದಿಗೆ ಬ್ಯಾಂಕ್ ವಿವರ, ವೈದ್ಯರಿಂದ ಪಡೆದ ಗುರುತಿನ ಚೀಟಿ/ಯು.ಡಿ.ಎ. ಕಾರ್ಡ್, ವಿಕಲಚೇತನರ 1 ಭಾವಚಿತ್ರ, ಮನೆಯ ದುರಸ್ಥಿ ಮೇಲ್ಛಾವಣೆ ಛಾಯಾಚಿತ್ರ ಹಾಗೂ ಮೊಬೈಲ್ ನಂಬರ್‌ನೊಂದಿಗೆ ಜನವರಿ 17ರೊಳಗಾಗಿ ಸಲ್ಲಿಸಬಹುದಾಗಿದೆ. ಅವದಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸರಿಯಾದ ದಾಖಲಾತಿಗಳು ಸಲ್ಲಿಸದೇ ಇದ್ದ ಪಕ್ಷದಲ್ಲಿ ತಮಗೆ ಯಾವುದೇ ಹಿಂಬರಹ ಕಳುಹಿಸದೇ ನೇರವಾಗಿ ವಿಭಾಗದ ಸಿಬ್ಬಂದಿಯವರು ತಿರಸ್ಕೃತ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ನೋಟಿಸ್ ಬೋರ್ಡ್ ನೋಡಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿವಿಧ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಜ.12–** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2026–27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ ಡಾ॥ಎ.ಪಿ.ಜೆ, ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಸೇವಾಸಿಂಧು ಮೂಲಕ ಆನ್ ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ರಾಯಚೂರು (ಬೋಳಮಾನದೊಡ್ಡಿ ರಸ್ತೆ), ಗಿಲ್ಲೇಸೂಗೂರು (ಚಂದ್ರಬಂಡಾ ರಸ್ತೆ), ಯರಮರಸ್ ಕ್ಯಾಂಪ್, ಗಿಲ್ಲೆಸುಗೂರು ಕ್ಯಾಂಪ್, ಮಾನವಿ, ಸಿಂಧನೂರು, ಚನ್ನಹಳ್ಳಿ, ಮಸ್ಕಿ, ಲಿಂಗಸೂಗೂರು, ಸಿರವಾರ, ದೇವದುರ್ಗ ಮತ್ತು ಡಾ॥ಎ.ಪಿ.ಜೆ, ಅಬ್ದುಲ್ ಕಲಾಂ ವಸತಿ ಶಾಲೆ, ಯರಮರಸ್ ಕ್ಯಾಂಪ್ ರಾಯಚೂರಿನಲ್ಲಿ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು ಸ್ಥಾನಗಳನ್ನು ಮತ್ತು ಶೇ.25 ರಷ್ಟು ಸ್ಥಾನಗಳನ್ನು ಇತರೆ ವರ್ಗದವರಿಗೆ ಮೀಸಲಿರಿಸಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ಮಿತಿ 1,00,000 ರೂ.ಕ್ಕೆ ಮೀತಿಯಲ್ಲಿರಬೇಕು. ಹಾಗೂ ಹಿಂದುಳಿದ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು 2,50,000 ರೂ.ಮಿತಿಯೊಳಗಿರತಕ್ಕದ್ದು, ಪ್ರಸ್ತುತ ಕರ್ನಾಟಕದ ಸರ್ಕಾರದ/ಅಂಗೀಕೃತ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ 6ನೇ ತರಗತಿ ಪ್ರವೇಶಕ್ಕಾಗಿ ಅಲ್ಪಸಂಖ್ಯಾತರ ಸಮುದಾಯದವರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ದಿಸ್ಟ್, ಸಿಖ್ ಮತ್ತು ಪಾರ್ಸಿ ಅರ್ಹ ವಿದ್ಯಾರ್ಥಿಗಳು ಮತ್ತು ಪ.ಜಾತಿ/ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಸೇವಾಸಿಂಧು ವೆಬ್‌ಸೈಟ್ ವಿಳಾಸ: Website:https:// sevasindhuservices.karnataka.gov.in ನಲ್ಲಿ ಫೆಬ್ರವರಿ 10ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಸಹಾಯವಾಣಿ: 8277799990, 08022535902, ರಾಯಚೂರು ಮೊಬೈಲ್ ನಂಬರ್: 8496098631, 9731028420, 9731341815, 9686853719, 6361866571, 9108175899, 9902906266 ಮಾನವಿ, ಸಿರವಾರ: 7411771075, 886733478, ದೇವದುರ್ಗ 9731794252, 9148233616, ಲಿಂಗಸೂಗೂರು, ಮಸ್ಕಿ ಮತ್ತು ಸಿಂಧನೂರು: 8217621732, 9740871306, 8660879712ಗೆ ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಶ್ಚಿಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿ ಕಾಣೆ: ಪತ್ತೆಗೆ ಮನವಿ



**ರಾಯಚೂರು,ಜ.12–**ಇಲ್ಲಿನ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯ ಅಸ್ಕಿಹಾಳ ನಿವಾಸಿ ಆಂಜನೇಯ (62) ಅವರು ಸೆಪ್ಟೆಂಬರ್ 14ರ ಮಧ್ಯಾಹ್ನ 12.30ಕ್ಕೆ ಮನೆಯಲ್ಲಿ ಊಟ ಮಾಡಿ ಹೊರಗೆ ಹೋದವನ್ನು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಠಾಣಾ ಅಪರಾಧ ಸಂಖ್ಯೆ: 128/2025 ಕಲಂ ಮನುಷ್ಯ ಕಾಣೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ತಮ್ಮ ತಂದೆಯ ಮೊಬೈಲ್ ಸಂಖ್ಯೆ: 9008104144ಗೆ ಅಂದು ಸಂಜೆ ಕರೆ ಮಾಡಿ ವಿಚಾರಿಸಿದಾಗ ಅವರು ಬರುತ್ತೇನೆ ಬಿಡು ಎಂದು ಸಿಟ್ಟು ಮಾಡಿದರು. ನಂತರ ಸಂಜೆ 4 ಗಂಟೆಗೆ ಕರೆ ಮಾಡಿದಾಗ ಅವರ ಮೊಬೈಲ್ ಸ್ವಿಚ್ಡ್ ಆಫ್ ಬಂದಿದೆ. ಕಾಣೆಯಾದ ತಮ್ಮ ತಂದೆಯ ಬಗ್ಗೆ ಸಂಬಂಧಿಕರ ಮನೆಯಲ್ಲಿ ಹುಡುಕಾಡಿದಾಗ ಪತ್ತೆಯಾಗಿರುವುದಿಲ್ಲ ಎಂದು ಕಾಣೆಯಾದ ಆಂಜನೇಯ ಅವರ ಪುತ್ರ, ನಾಗರಕಟ್ಟೆಯ ಕೃಷ್ಣಮೆಡೌಸ್‌ನಲ್ಲಿ ವಾಚಮನ್ ಆಗಿ ಕೆಲಸ ಮಾಡುವ ರಮೇಶ ಅವರು ದೂರು ದಾಖಲಿಸಿದ್ದಾರೆ.

ಕಾಣೆಯಾದ ವ್ಯಕ್ತಿಯ ಚಹರೆ: ಕಾಣೆಯಾದ ಆಂಜನೇಯು ಅವರು 5.6 ಎತ್ತರ, ತೆಳ್ಳನೆಯ ಮೈಕಟ್ಟು, ಗೋಧಿ ಮೈಬಣ್ಣ, ಉದ್ದನೆಯ ಮುಖ, ತಲೆಯಲ್ಲಿ ಕಪ್ಪು ಕೂದಲು ಹೊಂದಿದ್ದು, ಬಿಳಿ ಪಂಚೆ, ಬಿಳಿ ಜುಬ್ಬ ಹಾಗೂ ಹಸಿರು ಟಾವೆಲ್ ಬಟ್ಟೆಗಳನ್ನು ಧರಿಸಿರುತ್ತಾರೆ. ಕನ್ನಡ, ತೆಲುಗು, ಇಂಗ್ಲೀಷ್ ಹಾಗೂ ಹಿಂದಿ ಭಾಷೆ ಮಾತನಾಡುತ್ತಾರೆ.

ಈ ವ್ಯಕ್ತಿಯ ಬಗ್ಗೆ ಸುಳಿವು ಕಂಡುಬಂದಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532–232570, ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803847, ಪಶ್ಚಿಮ ವೃತ್ತ ಸಿ.ಪಿ.ಐ ಮೊಬೈಲ್ ಸಂಖ್ಯೆ: 9480803831, ಜಿಲ್ಲಾ ನಿಸ್ತಂತು ಘಟಕ ರಾಯಚೂರು ದೂರವಾಣಿ ಸಂಖ್ಯೆ: 08532–235635, 9480803800ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಪಶ್ಚಿಮ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿರವಾರ, ಮಾನವಿ: ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪುನಃ ಅರ್ಜಿ ಸಲ್ಲಿಸಲು ಜ.15ರವರೆಗೆ ಕಾಲಾವಕಾಶ

**ರಾಯಚೂರು,ಜ.12–** ಜಿಲ್ಲೆಯ ಸಿರವಾರ, ಮಾನವಿ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಆದೇಶದನ್ವಯ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ 2026ರ ಜನವರಿ 15ರವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ಅವಕಾಶ ನೀಡಿಲಾಗಿದೆ. ಒಂದನೇ ಹಂತ: ಆನ್‌ಲೈನ್ ತಂತ್ರಾಂಶದಲ್ಲಿ ನಿಗಧಿತ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬುವುದು, ಎರಡನೇ ಹಂತ: ತಮ್ಮ ಭಾವಚಿತ್ರ ಸಹಿಯನ್ನು ಅಪ್‌ಲೋಡ್ ಮಾಡುವುದು, ಮೂರನೇ ಹಂತ: ತಮ್ಮ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು, ನಾಲ್ಕನೇ ಹಂತ: ತಮ್ಮ ಆಧಾರ್ ಸಂಖ್ಯೆ ನಮೂದಿಸಿ, ಇ–ಹಸ್ತಾಕ್ಷರದೊಂದಿಗೆ ಅರ್ಜಿಯನ್ನು ಜನವರಿ 15 ರೊಳಗಾಗಿ ವೆಬ್‌ಸೈಟ್ ವಿಳಾಸ: https://karnemakaone.kar.nic.in/abcd/ ನಲ್ಲಿ ಪೂರ್ಣಗೊಳಿಸಬೇಕು. ಆನ್‌ಲೈನ್‌ನಲ್ಲಿ ಅಪೂರ್ಣ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಸಿರವಾರ, ಮಾನವಿ ಇವರನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕ ಮಾಡಬಹುದಾಗಿದೆಂದು ಸಿರವಾರ, ಮಾನವಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಣಿ ಪ್ರಕ್ರಿಯೆ ಆರಂಭ

**ರಾಯಚೂರು,ಜ.12–**ಇಲ್ಲಿನ ಸಹಕಾರ ಸಂಘಗಳ ಉಪ ನಿಬಂಧಕರವರ ಕಾರ್ಯಾಲಯದಿಂದ 2025–26ನೇ ಸಾಲಿನ ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಾಯಿಸುವ ಪ್ರಕ್ರಿಯೆ ಆರಂಭವಾಗಿದೆ.

ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಾಗಿದ್ದು, ಈ ಯೋಜನೆಯಡಿ ನೋಂದಾಯಿಸಲು ಸರ್ಕಾರವು ಆದೇಶ ಹೊರಡಿಸಿದ್ದು, ಅದರನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ, ಪಿಕಾರ್ಡ್ ಬ್ಯಾಂಕಗಳ, ಹಾಲು ಉತ್ಪಾದಕರ ಸಹಕಾರ ಸಂಘಗಳ, ಟಿ.ಎ.ಪಿ.ಸಿ.ಎಮ್.ಎಸ್‌ಗಳ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ 1997ರಡಿ ಅಥವಾ ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರಡಿ ನೋಂದಾಯಿಸಿ, ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘಗಳ ಸದಸ್ಯರು ಮತ್ತು ಗ್ರಾಮೀಣ ಸಹಕಾರ ಸಂಘಗಳ/ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಸ್ವಸಹಾಯ ಗುಂಪುಗಳ ಸದಸ್ಯರುಗಳು ಗರಿಷ್ಟ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ವಂತಿಗೆ 500ರೂ.ಗಳು ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಹೆಚ್ಚುವರಿ ಸದಸ್ಯರಿಗೆ 100ರೂ.ಗಳನ್ನು ಪಾವತಿಸಿ ನೋಂದಾಯಿಸಬಹುದು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ.

ಅದೇ ರೀತಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಾಯಿಸಲು ಈ ಯೋಜನೆಯಡಿ ಗರಿಷ್ಟ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ವಂತಿಗೆ ರೂ.1000/– ರಂತೆ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಹೆಚ್ಚುವರಿ ಸದಸ್ಯರಿಗೆ ರೂ.200/–ಗಳನ್ನು ಪಾವತಿಸಿ ನೋಂದಾಯಿಸಬಹುದು.

ನವಜಾತ ಶಿಶು ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡ್ನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಸೌಲಭ್ಯವನ್ನು ಮುಂದಿನ ವರ್ಷ ನೋಂದಾಣಿಯಾಗುವವರೆವಿಗೆ ಪಡೆಯಬಹುದು. ನಂತರದಲ್ಲಿ ಮಗುವಿನ ಹೆಸರನ್ನು ನೋಂದಾಯಿಸಿಕೊಂಡು ಯೋಜನೆಯ ಸೌಲಭ್ಯ ಪಡೆಯಬಹುದು.

ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಯಶಸ್ವಿನಿ ಯೋಜನೆಯಡಿ ನೋಂದಾಯಿಸುವ ದಿನಾಂಕಕ್ಕೆ ಕನಿಷ್ಠ 3 ತಿಂಗಳು ಕಳೆದಿರಬೇಕು. ಹಾಗೂ ವಯೋಮಿತಿಯ ನಿರ್ಬಂಧವಿರುವುದಿಲ್ಲ.

ಈ ಯೋಜನೆಯಡಿ ಯಶಸ್ವಿನಿ ಸದಸ್ಯರುಗಳನ್ನು ನೋಂದಾಯಿಸುವ/ನೋಂದಣಿ ಪ್ರಕ್ರಿಯೆಯನ್ನು ದಿನಾಂಕ:03–01–2026 ರಿಂದ ಪ್ರಾರಂಭವಾಗಿರುವುದರಿಂದ ಸದರಿ ಯೋಜನೆಯಡಿ ಸರಿ ಸುಮಾರು 1650 ಖಾಯಿಲೆಗಳಿಗೆ ಚಿಕಿತ್ಸೆಗಳು ಮತ್ತು 478 ಐ.ಸಿ.ಯು ಚಿಕಿತ್ಸೆಗಳು ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಯಡಿ ಅಳವಡಿಸಿಕೊಂಡಿರುವುದರಿಂದ ಸದರಿ ಯೋಜನೆಯ ಫಲಾನುಭವಿಗಳ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ 5.00 ಲಕ್ಷ ರೂ.ಗಳಿಗೆ ನಿಗಧಿಪಡಿಸಿದೆ. ರಾಜ್ಯದ ಯಾವುದೇ ಯಶಸ್ವಿನಿ ನೆಟ್‌ವರ್ಕ ಅಸ್ಪತ್ರೆಯಲ್ಲಿ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶವಿರುತ್ತದೆ. ಸದರಿ ಯೋಜನೆಯಡಿಯಲ್ಲಿ ನೋಂದಾಯಿಸಿ ಪ್ರಯೋಜನೆ ಪಡೆದುಕೊಳ್ಳಲು ಕೋರಲಾಗಿದೆ. 2025–26ನೇ ಯಶಸ್ವಿನಿ ಯೋಜನೆಯ ಅವಧಿ ದಿನಾಂಕ:03–01–2026 ರಿಂದ 31–03–2026ರವರೆಗೆ ಜಾರಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖಾ ಕಚೇರಿಗಳನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: ರಾಯಚೂರು 988730795, 7996998253, 08532–226268/9902165419, ಸಿಂಧನೂರು– 08535–230550/9844669557, ಮಾನವಿ 9164034407, ಲಿಂಗಸೂಗೂರು 9972551962, ಸಹಕಾರ ವಿಸ್ತೀರ್ಣಾಧಿಕಾರಿ ರಾಯಚೂರು 8904641721, ದೇವದುರ್ಗ 9686647802, ಸಿಂಧನೂರು 9880744147, ಮಸ್ಕಿ 9901103053, ಸಿರವಾರ 9900612229ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸಹಕಾರ ಸಂಘಗಳ ಉಪ ನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನವರಿ 14ರಂದು ಜಿಲ್ಲಾಡಳಿತದಿಂದ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ

**ರಾಯಚೂರು,ಜ.12–** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜನವರಿ 14ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ

# ಶಿವಮೂರ್ತಿ ಎಂಬ ಯುವಕ ಕಾಣೆ: ಪತ್ತೆಗೆ ಗ್ರಾಮೀಣ ಪೊಲೀಸರ ಮನವಿ



**ರಾಯಚೂರು,ಜ.12–:** ಜಿಲ್ಲೆಯ ದೇವದುರ್ಗ ತಾಲೂಕಿನ ಪಲಕನಮರಡಿ ಗ್ರಾಮದ ಶಿವಮೂರ್ತಿ ತಂದೆ ನಿಂಗಣ್ಣ (20) ಎಂಬ ಯುವಕ ರಾಯಚೂರಿನ ಯರಮರಸ್ ಕ್ಯಾಂಪನ ಬಿಸಿಎಮ್ ಇಲಾಖೆಯ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕರ ವಸತಿದಲ್ಲಿದ್ದು, 2025ರ ಏಪ್ರೀಲ್ 13ರ ಬೆಳಿಗ್ಗೆ 09:30 ಗಂಟೆಯಿಂದ ಹಾಸ್ಟೇಲ್ ನಿಂದ ಹೊರಗಡೆ ತನ್ನ ಸ್ನೇಹಿತರ ಸಂಗಡ ಯರಮರಸ್ ಕ್ಯಾಂಪ ವರೆಗೆ ಹೋಗಿದ್ದು, ತಾನು ರಾಯಚೂರುಗೆ ಹೋಗಿ ಬರುತ್ತೇನೆ ಅಂತಹ ತನ್ನ ಸ್ನೇಹಿತರಿಗೆ ಹೇಳಿ ಹೋದವನು ಇಲ್ಲಿಯವರೆಗೆ ಹಾಸ್ಟೇಲ್‌ಗೆ ಬರದೇ ಕಾಣೆಯಾಗಿದ್ದು, ಈ ಕುರಿತು ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ:57/2025ರಡಿ ಪ್ರಕರಣ ದಾಖಲಾಗಿದೆ.

**ಕಾಣೆಯಾದ ಯುವಕನ ಚಹರೆ:** ವಯಸ್ಸು 20, ಜಾತಿ ಕುರುಬರು, ಉದ್ಯೋಗ ವಿದ್ಯಾರ್ಥಿ, ಗೋಧಿ ಬಣ್ಣ ಮೈ ಬಣ್ಣ, ದುಂಡನೇಯ ಮುಖ, ತಲೆಯಲ್ಲಿ ಕಪ್ಪು ಕೂದಲು, ಬಿಳಿ ಬಣ್ಣದ ಲೈನ್ ಫುಲ್ ಶರ್ಟ್, ಕಪ್ಪು ಬಣ್ಣದ ಫ್ಯಾಂಟ್, ಗುಲಾಬಿ ಬಣ್ಣದ ಟವೆಲ್ ಕೊರಳಲ್ಲಿ ಧರಿಸಿದ್ದು, ಕನ್ನಡ, ಇಂಗ್ಲೀಷ್ ಭಾಷೆ ಮಾತನಾಡುತ್ತಾನೆ.

ಈ ಯುವಕನ ಬಗ್ಗೆ ಸುಳಿವು ಕಂಡುಬಂದಲ್ಲಿ ಪಿ.ಎಸ್.ಐ. ರಾಯಚೂರು ಗ್ರಾಮೀಣ ಪೊಲೀಸ್ ಠಾಣೆ ಮೊಬೈಲ್ ಸಂಖ್ಯೆ: 9480803850, ಹಾಗೂ ಸಿ.ಪಿ.ಐ. ಗ್ರಾಮೀಣ ವೃತ್ತ ರಾಯಚೂರು ಮೊಬೈಲ್: 9480803832ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ಗ್ರಾಮೀಣ ವೃತ್ತ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಸ್ಕಾಂ ನಗರ–2: ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಜ.12–:** ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–2ರ ವ್ಯಾಪ್ತಿಯ 110ಕೆವಿ 110/11ಏಗಿ, ಎಂಯುಎಸ್‌ಎಸ್, ಎಪಿಎಂಸಿ ಯಾರ್ಡ್ಡ ಡ್ರಾಗ್‌ಹೌಸ್ ಲಿಂಕ್ ಲೈನ್ ವಿಭಜನೆ ಕಾಮಗಾರಿಯನ್ನು ಕೈಗೊಂಡ ಪ್ರಯುಕ್ತ ಜನವರಿ 13ರ ಬೆಳಿಗ್ಗೆ 10ರಿಂದ ಸಂಜೆ 5ಗಂಟೆಯ ಅಲ್ಲಮಪ್ರಭು ಕಾಲೋನಿ, ಪೋತಗಲ್ ರೋಡ, ಎಲ್.ಬಿ.ಎಸ್. ನಗರ, ಅಲಿ ಕಾಲೋನಿ, ಚಂದ್ರಬಂಡ ರಸ್ತೆ, ಆಶ್ರಯ ಕಾಲೋನಿ ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ 24*7ಗ್ರಾಹಕರ ನಿರಂತರ ಸೇವಾ ಕೇಂದ್ರ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.16 ರಂದು ಬೀದರ ಏರ್ ಶೋ

**ಬೀದರ, ಜ.12–** ಭಾರತೀಯ ವಾಯುಪಡೆ ಬೀದರ ವತಿಯಿಂದ ಬೀದರ ಕೋಟೆಯ ಆವರಣದ ಮೇಲೆ ದಿನಾಂಕ: 16–01–2026 ರಂದು ಮಧ್ಯಾಹ್ನ 3 ಗಂಟೆಗೆ ಬೀದರ್ ಏರ ಶೋ ಹಮ್ಮಿಕೊಳ್ಳಲಾಗಿದೆ. ಬೀದರ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಬೀದರ ಏರ ಶೋ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದ್ದು, ಮಧ್ಯಾಹ್ನ 3 ಗಂಟೆಯೊಳಗೆ ಸಾರ್ವಜನಿಕರು ಬೀದರ ಕೋಟೆಯ ಒಳಗಡೆ ನಿಗದಿತ ಸ್ಥಳದೊಳಗೆ ಉಪಸ್ಥಿತರಿದ್ದು, ಬೀದರ ಏರ್ ಶೋ ವೀಕ್ಷಿಸಬಹುದಾಗಿದೆ ಎಂದು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H